| Publication: The Hindu | Date: 1 March 22 | Page: 14 |
| --- | --- | --- |

**Cricket for blind women from today**

The IndusInd Bank women's National T20 tournament for the blind will commence here on Tuesday. The tournament, organised by Cricket Association for the Blind in India (CABI) in association with the Samarthanam Trust for the Disabled, will see 14 State teams in action.

The winner will receive ₹1,04,000, and the runner-up will receive ₹80,000. The 'player-of-the-match' award carries prize money of ₹3,000, while the 'Player of the Series' will receive ₹10,000 as a cash prize. India cricketer Rajeshwari Gayakwad is the brand ambassador.

Governor of Karnataka Thaawar Chand Gehlot was present at the 'IndusInd Bank Blind Cricket National Conclave 2022' as Chief Guest. Former India cricketer Syed Kirmani was also present.

| Publication: Vijay Karnataka | Date: 1 March 22 | Page: 2 |
| --- | --- | --- |

# ದೃಷ್ಟಿ ವಿಶೇಷ ಚೇತನರ ಟಿ20 ಟೂರ್ನಿ ಇಂದಿನಿಂದ




**ಬೆಂಗಳೂರು:** ಇಂಡಸ್‌ಇಂಡ್ ಬ್ಯಾಂಕ್ ದೃಷ್ಟಿ ವಿಶೇಷಚೇತನ ಮಹಿಳೆಯರ ರಾಷ್ಟ್ರೀಯ ಟಿ20 ಟೂರ್ನಮೆಂಟ್ ಮಾರ್ಚ್ 1ರಿಂದ 5ರವರೆಗೆ ನಡೆಯಲಿದೆ.

ಸಮರ್ಥನಮ್ ಟ್ರಸ್ಟ್ ಹಾಗೂ ಭಾರತೀಯ ದೃಷ್ಟಿ ವಿಶೇಷಚೇತನರ ಸಂಸ್ಥೆಯು ಸಹಯೋಗದಲ್ಲಿ ಈ ಟೂರ್ನಿ ಆಯೋಜನೆಗೊಂಡಿದ್ದು, 14 ರಾಜ್ಯಗಳು ಪಾಲ್ಗೊಳ್ಳಲಿವೆ. ಬೆಂಗಳೂರಿನ 3 ಮೈದಾನಗಳಲ್ಲಿ ಪಂದ್ಯಗಳು ನಡೆಯಲಿದ್ದು, 224 ಆಟಗಾರ್ತಿಯರು ಪಾಲ್ಗೊಳ್ಳಲಿದ್ದಾರೆ.

ಸೋಮವಾರ ಸಂಜೆ ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಟೂರ್ನಿಯ ಟ್ರೋಫಿಯನ್ನು ಅನಾವರಣಗೊಳಿಸಲಾಯಿತು. ಕರ್ನಾಟಕ, ಒಡಿಶಾ, ರಾಜಸ್ಥಾನ, ಜಾರ್ಖಂಡ್, ಆಂಧ್ರಪ್ರದೇಶ, ಮಹಾರಾಷ್ಟ್ರ, ಮಧ್ಯಪ್ರದೇಶ, ಕೇರಳ, ಗುಜರಾತ್, ದಿಲ್ಲಿ, ಚಂಡಿಗಢ, ತಮಿಳುನಾಡು ಹಾಗೂ ಪಶ್ಚಿಮ ಬಂಗಾಳ ತಂಡಗಳು ಈ ಟೂರ್ನಿಯಲ್ಲಿ ಪಾಲ್ಗೊಳ್ಳಲಿವೆ. ವಿಜೇತ ತಂಡ 1,04,000 ರೂಪಾಯಿ ಬಹುಮಾನ ಹಾಗೂ ಟ್ರೋಫಿ, ರನ್ನರ್ ಅಪ್ ತಂಡ 80,000 ರೂ. ಹಾಗೂ ಪ್ರಶಸ್ತಿ ಸ್ವೀಕರಿಸಲಿದೆ.

ಟ್ರೋಫಿ ಅನಾವರಣ ಕಾರ್ಯಕ್ರಮದಲ್ಲಿ ಭಾರತೀಯ ದೃಷ್ಟಿ ವಿಶೇಷಚೇತನರ ಕ್ರಿಕೆಟ್ ಸಂಸ್ಥೆಯ ಅಧ್ಯಕ್ಷ ಡಾ. ಮಹಾಂತೇಶ್ ಕಿವಡಸಣ್ಣವರ್, ಭಾರತ ತಂಡದ ಮಾಜಿ ಆಟಗಾರ ಸುಧಾಕರ್ ರಾವ್ ಮುಂಬಯಿಯ ಕಮ್ಯುನಿಟಿ ಇನ್ವೆಸ್ಟ್‌ಮೆಂಟ್‌ನ ಉಪಾಧ್ಯಕ್ಷ ಶ್ರೀ ಅನಿಲ್ ಪರ್ಮಾರ್ ಮತ್ತಿತರರು ಉಪಸ್ಥಿತರಿದ್ದರು.

| Publication: Vijay Karnataka | Date: 1 March 22 | Page: 10 |
| --- | --- | --- |

# ವೈಕಲ್ಯಗಳು ಸಾಧನೆಗೆ ಅಡ್ಡಿಯಾಗದು: ರಾಜ್ಯಪಾಲ

■ **ವಿಕ ಸುದ್ದಿಲೋಕ** ಬೆಂಗಳೂರು

ಇಚ್ಛಾಶಕ್ತಿ ಇದ್ದರೆ ಅಂಗವೈಕಲ್ಯಗಳು ಸಾಧನೆಗೆ ಅಡ್ಡಿಯಾಗದು ಎಂದು ರಾಜ್ಯಪಾಲ ತಾವರ್‌ಚಂದ್ ಗೆಹ್ಲೋಟ್ ಹೇಳಿದರು.

ಬೆಂಗಳೂರಿನ ಚಾನ್ಸರಿ ಪೆವಿಲಿಯನ್ ಹೋಟೆಲ್‌ನಲ್ಲಿ ಸೋಮವಾರ ಭಾರತೀಯ ದೃಷ್ಟಿ ವಿಶೇಷಚೇತನರ ಕ್ರಿಕೆಟ್ ಸಂಸ್ಥೆ (ಸಿಎಬಿಐ) ಸಮರ್ಥನಮ್ ಸಂಸ್ಥೆ ಸಹಯೋಗದಲ್ಲಿ ಆಯೋಜಿಸಿದ್ದ ಇಂಡಸ್‌ಇಂಡ್ ಬ್ಯಾಂಕ್ ದೃಷ್ಟಿ ಬ್ಯಾಂಕ್ ದೃಷ್ಟಿ ವಿಶೇಷಚೇತನರ ಕ್ರಿಕೆಟ್ ರಾಷ್ಟ್ರೀಯ ಸಮ್ಮೇಳನ- 2022 ಉದ್ಘಾಟಿಸಿ ಮಾತನಾಡಿದರು.

'ಇಚ್ಛಾ ಶಕ್ತಿ ಹೊಂದಿದ್ದರೆ ಎಲ್ಲ ಸವಾಲುಗಳನ್ನು ಮೀರಿ



ಕಾರ್ಯಕ್ರಮವನ್ನು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಉದ್ಘಾಟಿಸಿದರು.

ಬೆಳೆಯಬಹುದು. ಅದಕ್ಕೆ ದೃಷ್ಟಿ ವಿಶೇಷಚೇತನ ಕ್ರಿಕೆಟಿಗರೇ ಉದಾಹರಣೆ,'' ಎಂದು ಹೇಳಿದರು.

ಇದೇ ವೇಳೆ ಅವರು ಯುಎಇನಲ್ಲಿ ಪಾಕಿಸ್ತಾನ ಹಾಗೂ ಬಾಂಗ್ಲಾದೇಶ ವಿರುದ್ಧದ ಟಿ20 ತ್ರಿಕೋನ ಸರಣಿಯಲ್ಲಿ ಪಾಲ್ಗೊಳ್ಳಲು ತೆರಳುತ್ತಿರುವ ಭಾರತೀಯ ದೃಷ್ಟಿ ವಿಶೇಷಚೇತನರ ತಂಡಕ್ಕೆ ಶುಭಾಶಯ ಕೋರಿದರು.

ಸಮ್ಮೇಳನದಲ್ಲಿ ದೃಷ್ಟಿ ವಿಶೇಷಚೇತನ ಕ್ರಿಕೆಟ್ ಕ್ಷೇತ್ರ ಎದುರಿಸುತ್ತಿರುವ ಸವಾಲುಗಳು, ಅವಕಾಶಗಳ ಬಗ್ಗೆ ನಾನಾ ಗೋಷ್ಠಿಗಳು ನಡೆದವು.

ಕಾರ್ಯಕ್ರಮದಲ್ಲಿ ಭಾರತೀಯ ದೃಷ್ಟಿ ವಿಶೇಷಚೇತನರ ಕ್ರಿಕೆಟ್ ಸಂಸ್ಥೆಯ ಅಧ್ಯಕ್ಷ ಡಾ. ಮಹಾಂತೇಶ್ ಕಿವಡಸಣ್ಣವರ್, ಇನ್ವೆಸ್ಟ್‌ಮೆಂಟ್ ಆ್ಯಂಡ್ ಡೆಪ್ಯುಟಿ ಕಮಿಷನರ್‌ನ ಸೌತ್ ಏಷ್ಯಾ ಟ್ರೇಡ್ ಕಮಿಷನರ್ ಅನ್ನಾ ಶಾಟ್‌ಬೋಲ್ಟ್, ಯುಎಸ್ ಕಾನ್ಸುಲೇಟ್‌ನ ಪಬ್ಲಿಕ್ ಅಫೇರ್ಸ್ ಕಾನ್ಸುಲ್ ಅನ್ನೆ ಶೇಷಾದ್ರಿ, ಮಾಜಿ ಕ್ರಿಕೆಟಿಗ ಸೈಯದ್ ಕಿರ್ಮಾನಿ, ಇಂಡಸ್ ಇಂಡ್ ಬ್ಯಾಂಕ್‌ನ ಸಿಎಸ್‌ಆರ್ ವಿಭಾಗದ ಮುಖ್ಯಸ್ಥೆ ಮೆಟಿಲ್ಡಾ ಲೋಬೊ, ಯುನೈಟೆಡ್ ವೇ ಮುಂಬಯಿಯ ಕಮ್ಯುನಿಟಿ ಇನ್ವೆಸ್ಟ್‌ಮೆಂಟ್‌ನ ಉಪಾಧ್ಯಕ್ಷ ಅನಿಲ್ ಪರ್ಮಾರ್ ಉಪಸ್ಥಿತರಿದ್ದರು.

| Publication: Vijayavani | Date: 1 March 22 | Page: 3 |
|---|---|---|


# ಇಂದಿನಿಂದ ಅಂಧರ ಕ್ರಿಕೆಟ್ ಪಂದ್ಯಾವಳಿ

## ಸಮರ್ಥನಂ, ಇಂಡಸ್‌ಇಂಡ್ ಬ್ಯಾಂಕ್ ಸಹಯೋಗ | ರಾಜ್ಯಪಾಲರಿಂದ ಉದ್ಘಾಟನೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಭಾರತೀಯ ದೃಷ್ಟಿ ವಿಶೇಷಚೇತನ ಕ್ರಿಕೆಟ್ ಸಂಸ್ಥೆಯು (ಸಿಎಬಿಐ) ಸಮರ್ಥನಂ ಸಹಯೋಗದೊಂದಿಗೆ ಮಾ.1ರಿಂದ 5ರವರೆಗೆ ನಗರದ ಹೊರವಲಯದ ಆಟದ ಮೈದಾನದಲ್ಲಿ 'ಇಂಡಸ್‌ಇಂಡ್ ಬ್ಯಾಂಕ್ ದೃಷ್ಟಿ ವಿಶೇಷ ಚೇತನ ಕ್ರಿಕೆಟ್ ಪಂದ್ಯಾವಳಿ' ಆಯೋಜಿಸಿದೆ.

14 ರಾಜ್ಯಗಳಿಂದ 14 ಕ್ರಿಕೆಟ್ ತಂಡಗಳು ಭಾಗವಹಿಸಲಿವೆ. ಈ ಪಂದ್ಯಾವಳಿಗೆ ಪೂರ್ವಭಾವಿಯಾಗಿ ಸೋಮವಾರ ಖಾಸಗಿ ಹೋಟೇಲ್‌ನಲ್ಲಿ ಆಯೋಜಿಸಿದ್ದ ಕ್ರಿಕೆಟ್ ರಾಷ್ಟ್ರೀಯ ಸಮ್ಮೇಳನಕ್ಕೆ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಚಾಲನೆ ನೀಡಿದರು. ಸೌತ್ ಏಷ್ಯಾ ಟ್ರೇಡ್ ಕಮಿಷನರ್ ಅನ್ನಾ ಶಾಟ್‌ಬೋಲ್ಟ್, ಯುಎಸ್ ಕಾನ್ಸುಲೇಟ್ ಪಬ್ಲಿಕ್ ಅಫೇರ್ಸ್ ಕಾನ್ಸುಲ್ ಅನ್ನೇ ಶೇಷಾದ್ರಿ, ಮಾಜಿ ಕ್ರಿಕೆಟಿಗ ಸೈಯದ್ ಕಿರ್ಮಾನಿ, ಸಮರ್ಥನಂ ಟ್ರಸ್ಟ್ ಸಂಸ್ಥಾಪಕ ಸಿಎಬಿಐ ಅಧ್ಯಕ್ಷ ಡಾ.ಮಹಾಂತೇಶ್ ಜಿ. ಕಿವಡಸಣ್ಣವರ್ ಉಪಸ್ಥಿತರಿದ್ದರು.




ವಿಜಯವಾಣಿ ಚಿತ್ರ

ಖಾಸಗಿ ಹೋಟೆಲ್‌ನಲ್ಲಿ ಏರ್ಪಡಿಸಿದ್ದ ಕ್ರಿಕೆಟ್ ರಾಷ್ಟ್ರೀಯ ಸಮ್ಮೇಳನಕ್ಕೆ ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಚಾಲನೆ ನೀಡಿದರು. ಮಾಜಿ ಕ್ರಿಕೆಟಿಗ ಸೈಯದ್ ಕಿರ್ಮಾನಿ, ಸಮರ್ಥನಂ ಟ್ರಸ್ಟ್ ಸಂಸ್ಥಾಪಕ ಸಿಎಬಿಐ ಅಧ್ಯಕ್ಷ ಡಾ.ಮಹಾಂತೇಶ್ ಕಿವಡಸಣ್ಣವರ್ ಮತ್ತಿತರರು ಉಪಸ್ಥಿತರಿದ್ದರು.



ಸಮಾರಂಭದಲ್ಲಿ ಭಾಗವಹಿಸಿದ್ದ ಕ್ರೀಡಾಳುಗಳು.

ಈ ವೇಳೆ ಮಾತನಾಡಿದ ರಾಜ್ಯಪಾಲರು, ಅಂಗವಿಕಲರು ಎಂಬ ಕಾರಣಕ್ಕೆ ನಾವು ಸಾಮಾನ್ಯ ಜನರಿಂದ ಅವರನ್ನು ದೂರವಿಡು ವುದು ತಪ್ಪು. ಅವರು ಇತರರಿಗಿಂತ ಬುದ್ಧಿವಂತರಾಗಿರುತ್ತಾರೆ. ಪ್ಯಾರಾ ಒಲಿಂಪಿಕ್ಸ್ ನಲ್ಲಿನ ಸಾಧನೆಯೇ ಈ ಮಾತಿಗೆ ಸಾಕ್ಷಿಯಾಗಿದೆ. ಒಲಿಂಪಿಕ್ಸ್‌ನಲ್ಲಿ 7 ಪದಕ ಬಂದಿದ್ದರೆ, ಪ್ಯಾರಾ ಒಲಿಂಪಿಕ್ಸ್‌ನಲ್ಲಿ 19 ಪದಕಗಳು ಭಾರತಕ್ಕೆ ದೊರೆತಿವೆ ಎಂದರು. ಕ್ರೀಡೆ ಎಂಬುದು ಮಾನವನ ಅವಿಭಾಜ್ಯ ಅಂಗವಾಗಿರಬೇಕು. ಅಂಗವಿಕಲರು ಸಹ ಕ್ರೀಡೆಯಲ್ಲಿ ತೊಡಗಿಸಿಕೊಳ್ಳುವುದು ಉತ್ತಮವಾದ ಪ್ರಕ್ರಿಯೆಯಾಗಿದೆ ಎಂದರು.

ಸಮರ್ಥನಂ ಸಂಸ್ಥಾಪಕ ಮಹಾಂತೇಶ್ ಮಾತನಾಡಿ, ನಾವು ಸಾಕಷ್ಟು ವರ್ಷಗಳಿಂದ ಅಂಧರ ಕ್ರಿಕೆಟ್ ಪಂದ್ಯಾವಳಿಯನ್ನು ಆಯೋಜನೆ ಮಾಡುತ್ತಿದ್ದೇವೆ. ಕಳೆದೆರಡು ವರ್ಷಗಳಿಂದ ಮಹಿಳಾ ಕ್ರಿಕೆಟ್ ಪಂದ್ಯಾವಳಿಯನ್ನು ನಡೆಸುತ್ತಿದ್ದೇವೆ. ಪಂದ್ಯಾವಳಿಯಲ್ಲಿ ವಿಜೇತ ತಂಡಕ್ಕೆ 1.04 ಲಕ್ಷ ರೂ. ಹಾಗೂ ರನ್ನರ್ ಅಪ್ ತಂಡಕ್ಕೆ 80 ಸಾವಿರ ರೂ. ನಗದು ಬಹುಮಾನ ಮತ್ತು ಟ್ರೋಫಿ ನೀಡಲಾಗುವುದು ಎಂದರು.

ಸಮ್ಮೇಳನ ಸಮಾವೇಶದಲ್ಲಿ ಅಂಧರ ಬದುಕು, ಕ್ರೀಡಾ ಸ್ಥಿತಿಗತಿ ಸೇರಿ ಹಲವು ವಿಷಯ ಕುರಿತು ಚರ್ಚೆಗಳು ನಡೆದವು.

| Publication: Prajavani | Date: 1 March 22 | Page: 12 |
| --- | --- | --- |





ರಾಷ್ಟ್ರೀಯ ಅಂಧ ಮಹಿಳೆಯರ ಟಿ20 ಕ್ರಿಕೆಟ್ ಟೂರ್ನಿಯ ಟ್ರೋಫಿ ಅನಾವರಣ ಕಾರ್ಯಕ್ರಮದಲ್ಲಿ (ಎಡದಿಂದ) ಕೊಟಕ್ ಮಹೀಂದ್ರಾ ಬ್ಯಾಂಕ್‌ನ ಸಿಎಸ್‌ಆರ್ ವಿಭಾಗದ ಮುಖ್ಯಸ್ಥೆ ಕೆ. ಪಲ್ಲವಿ ರಾಜ್, ಕೆಎಸ್‌ಸಿಎ ಮಾಜಿ ಕಾರ್ಯದರ್ಶಿ ಸುಧಾಕರ್ ರಾವ್, ಕಮ್ಯುನಿಟಿ ಇನ್ವೆಸ್ಟ್‌ಮೆಂಟ್‌ನ ಉಪಾಧ್ಯಕ್ಷ ಅನಿಲ್ ಪರಮಾರ್, ಇಂಡಸ್‌ಇಂಡ್ ಬ್ಯಾಂಕ್‌ನ ಸಿಎಸ್‌ಆರ್ ಮಟಿಲ್ಡಾ ಲೋಬೊ, ರಾಷ್ಟ್ರೀಯ ಅಂಧರ ಕ್ರಿಕೆಟ್ ಸಂಸ್ಥೆಯ (ಸಿಎಬಿಐ) ಅಧ್ಯಕ್ಷ ಮಹಾಂತೇಶ ಜಿ. ಕಿವಡಸಣ್ಣವರ್, ಡಾ. ಸುಭಾಷ್ ಮಹಾಜನ್, ನೈಕ್ ಸಂಸ್ಥೆಯ ಯೋಗಾನಂದ ಕೋಟೆ, ನಟ ಸಂಚಿತ ಸಂಜೀವ್, ರಾಜ್ಯ ಸರ್ಕಾರದ ಅಂಗವಿಕಲ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ನಿರ್ದೇಶಕಿ ಕೆ.ಎಸ್.ಲಲಿತಾಕುಮಾರಿ, ಸಿಎಬಿಐ ಪ್ರಧಾನ ಕಾರ್ಯದರ್ಶಿ ಇ. ಜಾನ್ ಡೇವಿಡ್ ಉಪಸ್ಥಿತರಿದ್ದರು.

# ಪ್ರಶಸ್ತಿಗೆ 14 ತಂಡಗಳ ಪೈಪೋಟಿ

## ರಾಷ್ಟ್ರೀಯ ಅಂಧ ಮಹಿಳೆಯರ ಟಿ20 ಟೂರ್ನಿ ಇಂದಿನಿಂದ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅಂಧ ಮಹಿಳೆಯರಿಗಾಗಿ ರಾಷ್ಟ್ರೀಯ ಟ್ವೆಂಟಿ-20 ಕ್ರಿಕೆಟ್ ಟೂರ್ನಿಯು ಉದ್ಯಾನನಗರಿಯಲ್ಲಿ ಮಂಗಳವಾರದಿಂದ ನಡೆಯಲಿದ್ದು 14 ತಂಡಗಳು ಪ್ರಶಸ್ತಿಗಾಗಿ ಸೆಣಸಲಿವೆ.

ನಗರದಲ್ಲಿ ಸೋಮವಾರ ನಡೆದ ಅಂಧರ ಕ್ರಿಕೆಟ್ ರಾಷ್ಟ್ರೀಯ ಸಮ್ಮೇಳನದಲ್ಲಿ ಈ ಕುರಿತು ಪ್ರಕಟಿಸಿ ಟೂರ್ನಿಯ ಟ್ರೋಫಿಗಳನ್ನು ಅನಾವರಣ ಮಾಡಲಾಯಿತು.

ಸಮರ್ಥನಂ ಸಂಸ್ಥೆಯ ಬೆಳ್ಳಿಹಬ್ಬದ ಸಂಭ್ರಮಾಚರಣೆಯನ್ನು ಮಾಡುತ್ತಿದ್ದು, ಈ ಹಿನ್ನೆಲೆಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಅಂಧ ಮಹಿಳೆಯರ ರಾಷ್ಟ್ರೀಯ ಟಿ20 ಟೂರ್ನಿ ಅದರಲ್ಲೊಂದು. ಮಾರ್ಚ್ 1ರಿಂದ ಮಾರ್ಚ್ 5ರವರೆಗೆ ಬೆಂಗಳೂರಿನ ಮೂರು ಕ್ರೀಡಾಂಗಣಗಳಲ್ಲಿ ಪಂದ್ಯಗಳು ನಡೆಯಲಿವೆ. 14 ರಾಜ್ಯಗಳು ಪಾಲ್ಗೊಳ್ಳಲಿದ್ದು, 224 ಆಟಗಾರ್ತಿಯರು ಪಾಲ್ಗೊಳ್ಳಲಿದ್ದಾರೆ. ಭಾರತ ಮಹಿಳಾ ಕ್ರಿಕೆಟ್ ತಂಡದ ಆಟಗಾರ್ತಿ ರಾಜೇಶ್ವರಿ ಗಾಯಕವಾಡ್ ಅವರು ಟೂರ್ನಿಯ ರಾಯಭಾರಿಯಾಗಿದ್ದಾರೆ.

**ಟೂರ್ನಿಯಲ್ಲಿ ಆಡಲಿರುವ ತಂಡಗಳು:** ಕರ್ನಾಟಕ, ಒಡಿಶಾ, ರಾಜಸ್ಥಾನ್, ಜಾರ್ಖಂಡ್, ಆಂಧ್ರಪ್ರದೇಶ, ಮಹಾರಾಷ್ಟ್ರ, ಮಧ್ಯಪ್ರದೇಶ, ಕೇರಳ, ಗುಜರಾತ್, ದೆಹಲಿ, ಚಂಡೀಗಢ, ತಮಿಳುನಾಡು, ಹಾಗೂ ಪಶ್ಚಿಮ ಬಂಗಾಳ.

**ಟೂರ್ನಿ ನಡೆಯುವ ಕ್ರೀಡಾಂಗಣಗಳು:** ಸಚಿನ್ ತೆಂಡೂಲ್ಕರ್ ಟರ್ಫ್ ಕ್ರೀಡಾಂಗಣ, ಚಂದಾಪುರ, ಅಲ್ಟಾಯಿರ್ ಸ್ಪೋರ್ಟ್ಸ್ ದೊಮ್ಮಸಂದ್ರ ಮತು ನಿರ್ಮಾಣ್ ಕಿ.ಕೆಟ್ ಚಂದಾಪುರ.

ಬೆಳಿಗ್ಗೆ ನಡೆದ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಅಂಧರ ಕ್ರಿಕೆಟ್ ರಾಷ್ಟ್ರೀಯ ಸಮ್ಮೇಳನಕ್ಕೆ ಚಾಲನೆ ನೀಡಿದರು. ಮಾರ್ಚ್ 13ರಿಂದ ಯುಎಇನಲ್ಲಿ ಬಾಂಗ್ಲಾದೇಶ ಹಾಗೂ ಪಾಕಿಸ್ತಾನ ತಂಡಗಳು ಎದುರು ನಡೆಯುವ ಅಂಧರ ಟಿ20 ತ್ರಿಕೋನ ಕ್ರಿಕೆಟ್ ಸರಣಿಯಲ್ಲಿ ಪಾಲ್ಗೊಳ್ಳಲಿರುವ ಭಾರತ ಪುರುಷರ ತಂಡಕ್ಕೆ ರಾಜ್ಯಪಾಲರು ಶುಭ ಕೋರಿದರು. ಭಾರತ ತಂಡದ ಮಾಜಿ ಆಟಗಾರ ಸೈಯದ್ ಕೀರ್ಮಾನಿ, ತಂಡದ ಆಟಗಾರರು ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಸಂಜೆ ನೀಡಿದ ಕಾರ್ಯಕ್ರಮದಲ್ಲಿ ಮಹಿಳಾ ಟೂರ್ನಿಗೆ ಚಾಲನೆ ನೀಡಲಾಯಿತು.

| Publication: Udayavani | Date: 1 March 22 | Page: 12 |
| --- | --- | --- |

# ಅಂಧರ ಕ್ರಿಕೆಟ್: ಭಾರತ ತಂಡದಲ್ಲಿ ರಾಜ್ಯದ ನಾಲ್ವರು

**ಬೆಂಗಳೂರು:** ಮಾ.13ರಿಂದ 19ರವರೆಗೆ ಯುಎಇಯ ಶಾರ್ಜಾದಲ್ಲಿ ಅಂಧರ ಕ್ರಿಕೆಟ್ ತ್ರಿಕೋನ ಸರಣಿ ನಡೆಯಲಿದೆ. ಇದಕ್ಕೆ ಪ್ರಕಟವಾಗಿರುವ ಭಾರತೀಯ ತಂಡಕ್ಕೆ ರಾಜ್ಯದ ನಾಲ್ವರು ಆಯ್ಕೆಯಾಗಿದ್ದಾರೆ. ಅನುಭವಿ ಆಟಗಾರ ಪ್ರಕಾಶ್ ಜಯರಾಮಯ್ಯ, ಸುನೀಲ್ ರಮೇಶ್, ಲೋಕೇಶ್, ಬಸಪ್ಪ ವಡ್ಡಾಗೊಲ್ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಈ ಕೂಟದಲ್ಲಿ ಭಾರತವಲ್ಲದೇ ಪಾಕಿಸ್ತಾನ, ಬಾಂಗ್ಲಾದೇಶ ತಂಡಗಳು ಪಾಲ್ಗೊಳ್ಳಲಿವೆ. ಲೀಗ್ ಹಂತದಲ್ಲಿ ಒಟ್ಟು 6 ಪಂದ್ಯಗಳು ನಡೆಯಲಿವೆ. ಮಾ. 19ಕ್ಕೆ ಅಂತಿಮ ಪಂದ್ಯ ನಡೆಯಲಿದೆ.

**ಯುಎಇ ತ್ರಿಕೋನ ಸರಣಿ**




ಭಾರತೀಯ ದೃಷ್ಟಿ ದಿವ್ಯಾಂಗರ ಕ್ರಿಕೆಟ್ ಸಂಸ್ಥೆಯು (ಕ್ಯಾಬಿ), ಸಮರ್ಥನಮ್ ಸಹಯೋಗದೊಂದಿಗೆ, ಬೆಂಗಳೂರಿನಲ್ಲಿ ದೃಷ್ಟಿ ದಿವ್ಯಾಂಗರ ರಾಷ್ಟ್ರೀಯ ಕ್ರಿಕೆಟ್ ಸಮ್ಮೇಳನ ಹಮ್ಮಿಕೊಂಡಿತ್ತು. ನಗರದ ದಿ ಚಾನ್ಸರಿ ಪೆವಿಲಿಯನ್ ಹೋಟೆಲ್‌ನಲ್ಲಿ ಕಾರ್ಯಕ್ರಮ ನಡೆಯಿತು.

| Publication: Andhra Jyothi | Date: 1 March 22 | Page: 11 |
|---|---|---|

# దివ్యాంగుల క్రికెట్‌కు ఆదరణ పెరగాలి




సమ్మేళనంలో గవర్నర్ థావర్‌చంద్ గెహ్లాట్ తదితరులు

**బెంగళూరు, ఫిబ్రవరి 28 (ఆంధ్రజ్యోతి):** దివ్యాంగుల క్రికెట్‌కు ఆదరణ పెరగాలని గవర్నర్ థావర్‌చంద్ గెహ్లాట్ అభిప్రాయపడ్డారు. ఇండస్‌ఇండ్ బ్యాంక్ అంధుల క్రికెట్ జాతీయ సమ్మేళనం సోమవారం నిర్వహించింది. కార్యక్రమంలో ఇన్వెస్ట్‌మెంట్ అండ్ డిప్యూటీ హై కమిషనర్ సౌత్ ఏషియా ట్రేడ్ కమిషనర్ అన్నా షాట్‌బోల్ట్, యూఎస్ కాన్సులేట్ పబ్లిక్ ఆఫీసర్ అన్నె శేషాద్రి, మాజీ క్రికెటర్ సయ్యద్ కిర్మాణీ, ఇండస్‌ఇండ్ బ్యాంక్ సీఎస్ఆర్ విభాగం ముఖ్యులు మొటిల్డా లోబో, ఇండియన్ బ్లైండ్ క్రికెట్ అసోసియేషన్ మహంతేశ్‌లు ముఖ్యులుగా పాల్గొన్నారు.

| Publication: Bharath Sarathiu | Date: 1 March 22 | Page: 4 |
|---|---|---|

# ಇಂಡಸ್‌ಇಂಡ್ ಬ್ಯಾಂಕ್ ದೃಷ್ಟಿ ವಿಶೇಷಚೇತನರ 'ಕ್ರಿಕೆಟ್ ರಾಷ್ಟ್ರೀಯ ಸಮ್ಮೇಳನ–2022'

ಬೆಂಗಳೂರು: ಭಾರತೀಯ ದೃಷ್ಟಿ ವಿಶೇಷಚೇತನರ ಕ್ರಿಕೆಟ್ ಸಂಸ್ಥೆಯು ಸಮರ್ಥನಮ್ ವಿಶೇಷ ಚೇತನರ ಸಂಸ್ಥೆಯ ಸಹಯೋಗದೊಂದಿಗೆ ಆಯೋಜಿಸಿದ್ದ 3ನೇ ಇಂಡಸ್ ಇಂಡ್ ಬ್ಯಾಂಕ್ ದೃಷ್ಟಿ ವಿಶೇಷಚೇತನರ ಕ್ರಿಕೆಟ್ ರಾಷ್ಟ್ರೀಯ ಸಮ್ಮೇಳನ– 2022ಕ್ಕೆ ಫೆಬ್ರವರಿ 28ರಂದು ಚಾಲನೆ ದೊರೆಯಿತು. ಬೆಂಗಳೂರಿನ ಶಾಂತಲಾ ನಗರದ ರೆಸಿಡೆನ್ಸಿ ರಸ್ತೆಯಲ್ಲಿರುವ ದಿ ಚಾನ್ಸರಿ ಪೆವಿಲಿಯನ್ನ ಗ್ರಾಂಡ್ ಬಾಲ್ ರೂಮ್ನಲ್ಲಿ ಬೆಳಗ್ಗೆ 10 ಗಂಟೆಗೆ ಕಾರ್ಯಕ್ರಮ ಉದ್ಘಾಟನೆಗೊಂಡಿತು.

ಕ್ರಿಕೆಟ್ ಆಸಕ್ತರು ಹಾಗೂ ತಜ್ಞರು, ಲಾಭೇತರ ಸಂಸ್ಥೆಯ ಸಿಬ್ಬಂದಿ, ಕಾರ್ಪೊರೇಟ್ ಸಂಸ್ಥೆಗಳ ಮುಖ್ಯಸ್ಥರು, ಸರಕಾರದ ಗಣ್ಯರು, ಹಾಗೂ ದೃಷ್ಟಿ ವಿಶೇಷಚೇತನ ಕ್ರಿಕೆಟ್ ತಂಡದ ಸದಸ್ಯರು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು.

ಕರ್ನಾಟಕ ರಾಜ್ಯದ ಘನತೆವೆತ್ತ ರಾಜ್ಯಪಾಲರಾದ ಶ್ರೀ ತಾವರ್ಚಂದ್ ಗೆಹ್ಲೋಟ್ ಅವರು ಇಂಡಸ್ ಇಂಡ್ ಬ್ಯಾಂಕ್ ದೃಷ್ಟಿವಿಶೇಷಚೇತನ ಕ್ರಿಕೆಟ್ ರಾಷ್ಟ್ರೀಯ ಸಮ್ಮೇಳನ– 2022ರ ಉದ್ಘಾಟನಾ ಸಮಾರಂಭದ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.




ಇನ್ವೆಸ್ಟ್ಮೆಂಟ್ ಅಂಡ್ ಡೆಪ್ಯುಟಿ ಹೈಕಮಿಷನರ್ನ ಸೌತ್ ಏಷ್ಯಾ ಟ್ರೇಡ್ ಕಮಿಷನರ್ ಅನ್ನಾ, ಶಾಟ್ಬೋಲ್ಟ್, ಯುಎಸ್ ಕಾನ್ಸುಲೇಟ್ನ ಪಬ್ಲಿಕ್ ಅಫೇರ್ಸ್ ಕಾನ್ಸುಲ್ ಆಗಿರುವ ಅನ್ನೀ ಶೇಷಾದ್ರಿ, ಮಾಜಿ ಕ್ರಿಕೆಟಿಗ ಸೈಯದ್ ಕಿರ್ಮಾನಿ, ಇಂಡಸ್ ಇಂಡ್ ಬ್ಯಾಂಕ್ನ ಸಿಎಸ್ಆರ್ ವಿಭಾಗದ ಮುಖ್ಯಸ್ಥರಾದ ಮಟಿಲ್ಡಾ ಲೋಬೊ, ಯುನೈಟೆಡ್ ವೇ ಮುಂಬಯಿಯ ಕಮ್ಯುನಿಟಿ ಇನ್ವೆಸ್ಟ್ಮೆಂಟ್ನ ಉಪಾಧ್ಯಕ್ಷ ಅನಿಲ್ ಪರ್ಮಾರ್, ಸಮರ್ಥನಮ್ ಟ್ರಸ್ಟ್ನ ಸಂಸ್ಥಾಪಕ ವ್ಯವಸ್ಥಾಪನಾ ಟ್ರಸ್ಟಿ ಹಾಗೂ ಭಾರತೀಯ ದೃಷ್ಟಿವಿಶೇಷಚೇತನ ಕ್ರಿಕೆಟ್ ಸಂಸ್ಥೆಯ ಅಧ್ಯಕ್ಷರಾದ ಡಾ. ಮಹಾಂತೇಶ್ ಜಿ. ಕಿವಡಸಣ್ಣವರ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಮಾರ್ಚ್ 13ರಿಂದ ಯುಎಇನಲ್ಲಿ ನಡೆಯಲಿರುವ ಬಾಂಗ್ಲಾದೇಶ ಹಾಗೂ ಪಾಕಿಸ್ತಾನ ದೃಷ್ಟಿ ವಿಶೇಷಚೇತನ ತಂಡಗಳ ವಿರುದ್ಧದ ಟಿ20 ತ್ರಿಕೋನ ಸರಣಿಗೆ ಹೊರಡಲಿರುವ ಭಾರತ ತಂಡಕ್ಕೆ ರಾಜ್ಯಪಾಲರಾದ ತಾವರ್ಚಂದ್ ಗೆಹ್ಲೋಟ್ ಅವರು ಶುಭಾಶಯ ಕೋರಿದರು.

ಈ ಟೂರ್ನಿಯ ಫೈನಲ್ ಪಂದ್ಯ ಮಾರ್ಚ್ 19ರಂದು ನಡೆಯಲಿದೆ. "ಯುಎಇಗೆ ತ್ರಿಕೋನ ಸರಣಿಗೆ ಹೊರಟಿರುವ ನಿಮಗೆ ಶುಭಾಶಯಗಳು," ಎಂದು ರಾಜ್ಯಪಾಲರು ಹೇಳಿದರು.

| Publication: Dakshin Bharath | Date: 1 March 22 | Page: 3 |
| --- | --- | --- |

# इच्छाशक्ति और जज्बा हो तो उपलब्धि संभव : राज्यपाल

दक्षिण भारत राष्ट्रमत
dakshinbharat.com

बेंगलूरु। यदि इच्छा शक्ति और उत्साह है, तो दृष्टिहीन या कोई भी विकलांगता उपलब्धि का कारक नहीं होगी। यह बात राज्यपाल थॉवरचन्द गेहलोत ने इंडसलैंड बैंक ब्लाइंड क्रिकेट नेशनल कांफ्रेंस-2022 के उद्घाटन अवसर पर कही। उन्होंने कहा कि विशेष चीयरलीडर्स मानव संसाधन का एक अभिन्न अंग हैं और हमारा मिशन उन्हें समाज की मुख्यधारा में लाकर देश के विकास में भागीदार बनाना है। हम सभी का कर्तव्य है कि हम विशेष भावना का संचार करें। राज्यपाल थावरचंद गहलोत ने 'द चांसरी पवेलियन' में विकलांगों में समर्थनम ट्रस्ट द्वारा आयोजित इंडुआसलैंड बैंक ब्लाइंड क्रिकेट नेशनल कॉन्क्लेव-2022 का उद्घाटन किया। भारत के पूर्व क्रिकेटर सैयद किरमानी और अन्य गणमान्य व्यक्ति थे।




उन्होंने कहा कि हमारे देश के प्रधानमंत्री के कुशल नेतृत्व में 'सबका साथ, सबका विकास' के मंत्र को साकार करते हुए भारत सरकार एक समावेशी समाज के निर्माण और सभी के सशक्तिकरण के लिए एक अभूतपूर्व और सराहनीय कार्य कर रही है। उन्होंने कहा कि भारत सरकार के निःशक्तजन अधिकारिता विभाग की एडीआईपी योजना के तहत दूरदर्शी निःशक्तजनों को स्मार्ट डिवाइस जैसे स्मार्टफोन, डिजिटल स्टिकर और वॉकिंग स्टिक तथा स्मार्ट कैन उपलब्ध कराए जा रहे हैं।

दृष्टिबाधित लोगों की शिक्षा और पुनर्वास के लिए भारत सरकार द्वारा राष्ट्रीय दृष्टि विकलांग संस्थान देहरादून (एनआईवीएच) की स्थापना की गई है। उन्होंने कहा कि भारत सरकार ब्रेल प्रेस की स्थापना और मौजूदा ब्रेल प्रेस के आधुनिकीकरण का एक महत्वाकांक्षी कार्यक्रम चला रही है ताकि ब्रेल विकास और ब्रेल पुस्तकों की उपलब्धता सुनिश्चित हो सके। कई परियोजनाओं के माध्यम से दिव्यांगों का सशक्तिकरण किया जा रहा है। कॉरपोरेट जगत और कई स्वयं सहायता संगठन सरकार के सशक्तिकरण के लिए कड़ी मेहनत कर रहे हैं। समर्थनाम ट्रस्ट उनमें से एक है। डॉ. महंतेश के प्रयासों से आज देश ने दृष्टिबाधित क्रिकेट की दुनिया में एक नई पहचान बनाई है। नेत्रहीन क्रिकेट टीम ने, विशेष रूप से, नेत्रहीनों के लिए 2014 विश्व कप जीतकर भारत के सम्मान को बढ़ाया। उन्होंने कहा कि भारत सरकार के सामाजिक न्याय एवं अधिकारिता मंत्रालय की ओर से निःशक्तजनों को नगद पुरस्कार देकर सम्मानित किया गया।

इस मौके पर पूर्व भारतीय क्रिकेटर सैयद किरमानी, समर्थनम ट्रस्ट के संस्थापक महंतेश और इंडस बैंक के मथिल्डा लोबा भी मौजूद थे।

| Publication: Eeandu | Date: 1 March 22 | Page: 9 |
| --- | --- | --- |




గవర్నర్ థావర్ చంద్ గహ్లోత్‌తో దివ్యాంగ క్రికెటర్లు

# దివ్యాంగ క్రికెటర్లకు వెన్నుదన్ను

**బెంగళూరు (క్రీడలు), న్యూస్‌టుడే :** భారత దివ్యాంగ క్రికెట్ సమాఖ్య, సమర్థనం దివ్యాంగ సంస్థ ఆధ్వర్యంలో మూడో 'ఇండస్‌బ్యాంక్ క్రికెట్ జాతీయ సదస్సు'ను గవర్నర్ థావర్‌చంద్ గహ్లోత్ ప్రారంభించారు. బెంగళూరులోని ఓ ప్రైవేట్ హోటల్‌లో సోమవారం నిర్వహించిన ఈ కార్యక్రమంలో గవర్నర్ మాట్లాడుతూ ఈనెల 13 నుంచి యునైటెడ్ అరబ్ ఎమిరేట్స్‌లో ప్రారంభమయ్యే క్రికెట్ పోటీల్లో పాల్గొంటున్న భారత జట్టు సభ్యులు చక్కగా రాణించాలని ఆకాంక్షించారు. భారత దివ్యాంగ క్రికెట్ సమాఖ్య అధ్యక్షుడు డాక్టర్ మహంతేష్ కివడసణ్ణవర్ మాట్లాడుతూ వైకల్యాన్ని మరచి.. క్రికెట్లో రాణిస్తున్న వారి తీరు అద్భుతమని శ్లాఘించారు. భవిత కోసం ఆటల పోటీలు ఊతంగా నిలుస్తాయని వివరించారు. మాజీ అంతర్జాతీయ క్రికెటర్ సయ్యద్ కిర్మానీ, నిర్వాహక ప్రముఖులు అన్నా శాట్‌బోల్ట్, అనిల్ పర్మార్, ఇండస్‌బ్యాంక్ సీఎస్‌ఆర్ విభాగం ముఖ్యుడు మటిల్డా లోబో తదితరులు పాల్గొన్నారు.

| Publication: Hosaidgantha | Date: 1 March 22 | Page: 12 |
|---|---|---|

# ಅಂಧರ ಕ್ರಿಕೆಟ್ ರಾಷ್ಟ್ರೀಯ ಸಮ್ಮೇಳನಕ್ಕೆ ಚಾಲನೆ

**ಬೆಂಗಳೂರು:** ಭಾರತೀಯ ಅಂಧರ ಕ್ರಿಕೆಟ್ ಸಂಸ್ಥೆ (ಸಿಎಬಿಐ) ಸಮರ್ಥನಂ ವಿಶೇಷ ಚೇತನರ ಸಂಸ್ಥೆಯ ಸಹಯೋಗದೊಂದಿಗೆ ರಾಷ್ಟ್ರೀಯ ಸಮ್ಮೇಳನಕ್ಕೆ ಅದ್ದೂರಿ ಚಾಲನೆ ಸಿಕ್ಕಿದೆ.

ಅತಿಥಿಗಳಾಗಿ ಆಗಮಿಸಿದ್ದ ರಾಜ್ಯಪಾಲ ತಾವರ್ ಚಂದ್ ಗೆಹ್ಲೋಟ್, ಯುಎಇಯಲ್ಲಿ ನಡೆಯಲಿರುವ ಟಿ20 ತ್ರಿಕೋನ ಸರಣಿಗೆ ಭಾಗವಹಿಸುವ ಭಾರತ ಅಂಧರ ತಂಡಕ್ಕೆ ಶುಭ ಹಾರೈಸಿದರು.

ಮಾಜಿ ಕ್ರಿಕೆಟಿಗ ಸಯ್ಯದ್ ಕಿರ್ಮಾನಿ, ಸಿಎಸ್ ಆರ್ ವಿಭಾಗದ ಮುಖ್ಯಸ್ಥ ಶೇಷಾದ್ರಿ, ಮಟಿಲ್ಡಾ ಲೋಬೋ, ಅನಿಲ್ ಪರ್ಮಾರ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



| Publication: Saakshathsuddi | Date: 1 March 22 | Page: 3 |
| --- | --- | --- |

# ಇಚ್ಛಾಶಕ್ತಿ, ಉತ್ಸಾಹವಿದ್ದರೆ ಸಾಧನೆ ಸಾಧ್ಯ: ಥಾವರ್ ಚಂದ್ ಗೆಹ್ಲೋಟ್

**ಬೆಂಗಳೂರು:** ಇಚ್ಛಾಶಕ್ತಿ ಮತ್ತು ಉತ್ಸಾಹ ಹೊಂದಿದ್ದರೆ ದೃಷ್ಟಿಹೀನತೆ ಅಥವಾ ಯಾವುದೇ ಅಂಗವೈಕಲ್ಯವು ಸಾಧನೆಗೆ ಅಡಿ ಮಾಡುವುದಿಲ್ಲ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಹೇಳಿದರು.

ಬೆಂಗಳೂರಿನ ಚಾನ್ಸರಿ ಪೆವಿಲಿಯನ್‌ನಲ್ಲಿ ಸಮರ್ಥನಂ ಟ್ರಸ್ಟ್ ವಿಕಲಚೇತನರಿಗಾಗಿ ಆಯೋಜಿಸಿದ್ದ ರಾಷ್ಟ್ರೀಯ ಇಂಡಸ್ಲ್ಯಾಂಡ್ ಬ್ಯಾಂಕ್ ಬ್ಲೈಂಡ್ ಕ್ರಿಕೆಟ್–2022ಅನ್ನು ಉದ್ಘಾಟಿಸಿ ಮಾತನಾಡಿದರು.

ವಿಶೇಷ ಚೇತನರು ಮಾನವ ಸಂಪನ್ಮೂಲದ ಅವಿಭಾಜ್ಯ ಅಂಗವಾಗಿದ್ದು, ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಮೂಲಕ ದೇಶದ ಅಭಿವೃದ್ಧಿಯಲ್ಲಿ ಪಾಲುದಾರರನ್ನಾಗಿ ಮಾಡುವುದು ನಮ್ಮ ಗುರಿಯಾಗಿದೆ. ವಿಶೇಷ ಚೇತನರಲ್ಲಿ ಇಚ್ಛಾಶಕ್ತಿ ಮತ್ತು ಉತ್ಸಾಹ ತುಂಬುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದರು.

ಪ್ರಧಾನಮಂತ್ರಿಯವರ ಸಮರ್ಥ ನಾಯಕತ್ವದಲ್ಲಿ "ಸಬ್ಕಾ ಸಾಥ್ ಸಬ್ಕಾ ವಿಕಾಸ್" ಮಂತ್ರವನ್ನು ಅರಿತುಕೊಂಡ ಕೇಂದ್ರ ಸರ್ಕಾರವು ಎಲ್ಲರನ್ನೂ ಒಳಗೊಳ್ಳುವ ಸಮಾಜವನ್ನು ನಿರ್ಮಿಸಲು ಮತ್ತು




ದಿವ್ಯಾಂಗರ ಸಬಲೀಕರಣಕ್ಕಾಗಿ ಅಭೂತಪೂರ್ವ ಮತ್ತು ಶ್ಲಾಘನೀಯ ಕೆಲಸವನ್ನು ಮಾಡುತ್ತಿದೆ. ಕೇಂದ್ರ ಸರ್ಕಾರದ ವಿಕಲಚೇತನರ ಸಬಲೀಕರಣ ಇಲಾಖೆಯ ಎಡಿಐಪಿ ಯೋಜನೆಯಡಿ ದೃಷ್ಟಿ ವಿಕಲಚೇತನರಿಗೆ ಸ್ಮಾರ್ಟ್ ಫೋನ್, ಡಿಜಿಪ್ಲೇಯರ್ ಮತ್ತು ವಾಕಿಂಗ್ ಸ್ಟಿಕ್ಗಳು ಮತ್ತು ಸ್ಮಾರ್ಟ್ ಕ್ಯಾನ್‌ಗಳಂತಹ ಸಹಾಯಕ ಸಾಧನಗಳನ್ನು ಒದಗಿಸಲಾಗುತ್ತಿದೆ ಎಂದು ಹೇಳಿದರು.

ದೃಷ್ಟಿ ವಿಕಲಚೇತನರ ಶಿಕ್ಷಣ ಮತ್ತು ಪುನರ್ವಸತಿಗಾಗಿ ಭಾರತ ಸರ್ಕಾರದಿಂದ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ವಿಶ್ಯುಲಿ ಹ್ಯಾಂಡಿಕ್ಯಾಪ್ಡ್ ಡೆಹ್ರಾಡೂನ್‌ಅನ್ನು ಸ್ಥಾಪಿಸಲಾಗಿದೆ. ಭಾರತ ಸರ್ಕಾರವು ಬ್ರೈಲ್ ಅಭಿವೃದ್ಧಿಗಾಗಿ ಮತ್ತು ಬ್ರೈಲ್ ಪುಸ್ತಕಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಬ್ರೈಲ್ ಪ್ರೆಸ್‌ಗಳ ಸ್ಥಾಪನೆ ಮತ್ತು ಅಸ್ತಿತ್ವದಲ್ಲಿರುವ ಬ್ರೈಲ್ ಪ್ರೆಸ್‌ಗಳ ಆಧುನೀಕರಣದ ಮಹತ್ವಾಕಾಂಕ್ಷೆಯ ಕಾರ್ಯಕ್ರಮವನ್ನು ಕೈಗೊಳ್ಳುತ್ತಿದೆ ಎಂದು ತಿಳಿಸಿದರು.

ದಿವ್ಯಾಂಗ ಜನರ ಸಬಲೀಕರಣವನ್ನು ಹಲವು ಯೋಜನೆಗಳ ಮೂಲಕ ಮಾಡಲಾಗುತ್ತಿದೆ. ದಿವ್ಯಾಂಗರ ಸಬಲೀಕರಣಕ್ಕಾಗಿ ಸರ್ಕಾರದ ಜೊತೆಗೆ ಕಾರ್ಪೊರೇಟ್ ಜಗತ್ತು ಮತ್ತು ಅನೇಕ ಸ್ವಯಂ ಸೇವಾ ಸಂಸ್ಥೆಗಳು ಶ್ರಮಿಸುತ್ತಿವೆ. ಅದರಲ್ಲಿ ಸಮರ್ಥನಂ ಟ್ರಸ್ಟ್ ಕೂಡ ಒಂದಾಗಿದೆ. ಡಾ. ಮಹಾಂತೇಶ ಜೀ ಅವರ ಪ್ರಯತ್ನದಿಂದ ಇಂದು ದೃಷ್ಟಿ ವಿಕಲಚೇತನರ ಕ್ರಿಕೆಟ್ನಲ್ಲಿ ದೇಶವು ವಿಶ್ವದಲ್ಲೇ ಹೊಸ ಗುರುತನ್ನು ಪಡೆದುಕೊಂಡಿದೆ. ವಿಶೇಷವಾಗಿ ಅಂಧರ ಕ್ರಿಕೆಟ್ ತಂಡ, 2014 ರಲ್ಲಿ ಅಂಧರ ವಿಶ್ವಕಪ್ ಗೆಲ್ಲುವ ಮೂಲಕ ಭಾರತದ ಗೌರವವನ್ನು ಹೆಚ್ಚಿಸಿತು. ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಅಂಗವಿಕಲ ವ್ಯಕ್ತಿಗಳ ಸಬಲೀಕರಣ ಇಲಾಖೆಯಿಂದ ದೃಷ್ಟಿ ವಿಕಲಚೇತನ ತಂಡದ ಆಟಗಾರರಿಗೆ ನಗದು ಬಹುಮಾನ ನೀಡಿ ಪ್ರೋತ್ಸಾಹಿಸಲಾಯಿತು ಎಂದರು.

ಕಾರ್ಯಕ್ರಮದಲ್ಲಿ ಭಾರತದ ಮಾಜಿ ಕ್ರಿಕೆಟಿಗ ಸೈಯದ್ ಕಿರ್ಮಾನಿ, ಸಮರ್ಥನಂ ಟ್ರಸ್ಟ್ ಸಂಸ್ಥಾಪಕ ಮಹಂತೇಶ್, ಇಂಡಸ್ ಬ್ಯಾಂಕ್‌ನ ಮತಿಲ್ಡಾ ಲೋಬಾ ಸೇರಿದಂತೆ ಮುಂತಾದ ಗಣ್ಯರು ಉಪಸ್ಥಿತರಿದ್ದರು.

| Publication: Samyukata Karnataka | Date: 1 March 22 | Page: 3 |
|---|---|---|

# ಇಚ್ಛಾಶಕ್ತಿ ಇದ್ದರೆ ಸಾಧನೆ ಸಾಧ್ಯ

**ಬೆಂಗಳೂರು:** ಇಚ್ಛಾಶಕ್ತಿ ಮತ್ತು ಉತ್ಸಾಹ ಹೊಂದಿದ್ದರೆ ದೃಷ್ಟಿಹೀನತೆ ಅಥವಾ ಯಾವುದೇ ಅಂಗವೈಕಲ್ಯವು ಸಾಧನೆಗೆ ಅಡಿ ಮಾಡುವುದಿಲ್ಲ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಹೇಳಿದರು. ಸಮರ್ಥನಂ ಟ್ರಸ್ಟ್ ವಿಕಲಚೇತನರಿಗಾಗಿ ಆಯೋಜಿಸಿದ್ದ ಇಂಡಸ್‌ಲ್ಯಾಂಡ್ ಬ್ಯಾಂಕ್ ಬ್ಲೈಂಡ್ ಕ್ರಿಕೆಟ್ ರಾಷ್ಟ್ರೀಯ ಸಮ್ಮೇಳನ-2022 ಅನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿಶೇಷ ಚೇತನರು ಮಾನವ ಸಂಪನ್ಮೂಲದ ಅವಿಭಾಜ್ಯ ಅಂಗವಾಗಿದ್ದು, ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಮೂಲಕ ದೇಶದ ಅಭಿವೃದ್ಧಿಯಲ್ಲಿ ಪಾಲುದಾರರನ್ನಾಗಿ ಮಾಡುವುದು ನಮ್ಮ ಗುರಿಯಾಗಿದೆ. ವಿಶೇಷ ಚೇತನರಲ್ಲಿ ಇಚ್ಛಾಶಕ್ತಿ ಮತ್ತು ಉತ್ಸಾಹ ತುಂಬುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದರು.

ದೃಷ್ಟಿ ವಿಕಲಚೇತನರ ಶಿಕ್ಷಣ ಮತ್ತು ಪುನರ್ವಸತಿಗಾಗಿ ಭಾರತ ಸರ್ಕಾರದಿಂದ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ವಿಶ್ಯುಲಿ ಹ್ಯಾಂಡಿಕ್ಯಾಪ್ಡ್ ಡೆಹ್ರಾಡೂನ್ ಅನ್ನು ಸ್ಥಾಪಿಸಲಾಗಿದೆ. ಭಾರತ ಸರ್ಕಾರವು ಬ್ರೈಲ್ ಅಭಿವೃದ್ಧಿಗಾಗಿ ಮತ್ತು ಬ್ರೈಲ್ ಪುಸ್ತಕಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಬ್ರೈಲ್ ಪ್ರೆಸ್‌ಗಳ ಸ್ಥಾಪನೆ ಮತ್ತು ಅಸ್ತಿತ್ವದಲ್ಲಿರುವ ಬ್ರೈಲ್ ಪ್ರೆಸ್‌ಗಳ ಆಧುನೀಕರಣದ ಮಹತ್ವಾಕಾಂಕ್ಷೆಯ ಕಾರ್ಯಕ್ರಮವನ್ನು ಕೈಗೊಳ್ಳುತ್ತಿದೆ. ದಿವ್ಯಾಂಗಜನರ ಸಬಲೀಕರಣವನ್ನು ಹಲವು ಯೋಜನೆಗಳ ಮೂಲಕ ಮಾಡಲಾಗುತ್ತಿದೆ. ದಿವ್ಯಾಂಗರ ಸಬಲೀಕರಣಕ್ಕಾಗಿ ಸರ್ಕಾರದ ಜೊತೆಗೆ ಕಾರ್ಪೊರೇಟ್ ಜಗತ್ತು ಮತ್ತು ಅನೇಕ ಸ್ವಯಂ ಸೇವಾ ಸಂಸ್ಥೆಗಳು ಶ್ರಮಿಸುತ್ತಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಭಾರತದ ಮಾಜಿ ಕ್ರಿಕೆಟಿಗ ಸೈಯದ್ ಕಿರ್ಮಾನಿ, ಸಮರ್ಥನಂ ಟ್ರಸ್ಟ್ ಸಂಸ್ಥಾಪಕ ಮಹಂತೇಶ್, ಇಂಡಸ್ ಬ್ಯಾಂಕ್‌ನ ಮಿಲ್ಹಾ ಲೋಬಾ ಸೇರಿದಂತೆ ಮುಂತಾದ ಗಣ್ಯರು ಉಪಸ್ಥಿತರಿದ್ದರು.




ಇಂಡಸ್‌ಲ್ಯಾಂಡ್ ಬ್ಯಾಂಕ್ ಬ್ಲೈಂಡ್ ಕ್ರಿಕೆಟ್ ರಾಷ್ಟ್ರೀಯ ಸಮ್ಮೇಳನ.

| | | |
|---|---|---|
| **Publication: Suvrna Times of Karnataka** | **Date: 1 March 22** | **Page: 7** |

# ಇಂಡಸ್ ಇಂಡ್ ಬ್ಯಾಂಕ್ ದೃಷ್ಟಿ ವಿಶೇಷಚೇತನರ ಕ್ರಿಕೆಟ್ ಸಮ್ಮೇಳನ

**ಬೆಂಗಳೂರು:** ಭಾರತೀಯ ದೃಷ್ಟಿ ವಿಶೇಷಚೇತನರ ಕ್ರಿಕೆಟ್ ಸಂಸ್ಥೆಯು (CABI) ಸಮರ್ಥನಮ್ ವಿಶೇಷ ಚೇತನರ ಸಂಸ್ಥೆಯ ಸಹಯೋಗದೊಂದಿಗೆ ಆಯೋಜಿಸಿದ್ದ 3ನೇ ಇಂಡಸ್ ಇಂಡ್ ಬ್ಯಾಂಕ್ ದೃಷ್ಟಿ ವಿಶೇಷಚೇತನರ ಕ್ರಿಕೆಟ್ ರಾಷ್ಟ್ರೀಯ ಸಮ್ಮೇಳನ– 2022ಕ್ಕೆ ಫೆಬ್ರವರಿ 28ರಂದು ಚಾಲನೆ ದೊರೆಯಿತು. ಬೆಂಗಳೂರಿನ ಶಾಂತಲಾ ನಗರದ ರೆಸಿಡೆನ್ಸಿ ರಸ್ತೆಯಲ್ಲಿರುವ ದಿ ಚಾನ್ಸರಿ ಪೆವಿಲಿಯನ್ನ ಗ್ರಾಂಡ್ ಬಾಲ್ ರೂಮ್ನಲ್ಲಿ ಬೆಳಗ್ಗೆ 10 ಗಂಟೆಗೆ ಕಾರ್ಯಕ್ರಮ ಉದ್ಘಾಟನೆಗೊಂಡಿತು.




ಕ್ರಿಕೆಟ್ ಆಸಕ್ತರು ಹಾಗೂ ತಜ್ಞರು, ಲಾಭೇತರ ಸಂಸ್ಥೆಯ ಸಿಬ್ಬಂದಿ, ಕಾರ್ಪೋರೇಟ್ ಸಂಸ್ಥೆಗಳ ಮುಖ್ಯಸ್ಥರು, ಸರಕಾರದ ಗಣ್ಯರು, ಹಾಗೂ ದೃಷ್ಟಿ ವಿಶೇಷಚೇತನ ಕ್ರಿಕೆಟ್ ತಂಡದ ಸದಸ್ಯರು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು.

ಕರ್ನಾಟಕ ರಾಜ್ಯದ ಘನತೆವೆತ್ತ ರಾಜ್ಯಪಾಲರಾದ ಶ್ರೀ ತಾವರ್ಚಂದ್ ಗೆಹ್ಲೋಟ್ ಅವರು ಇಂಡಸ್ ಇಂಡ್ ಬ್ಯಾಂಕ್ ದೃಷ್ಟಿವಿಶೇಷಚೇತನ ಕ್ರಿಕೆಟ್ ರಾಷ್ಟ್ರೀಯ ಸಮ್ಮೇಳನ– 2022ರ ಉದ್ಘಾಟನಾ ಸಮಾರಂಭದ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಇನ್ವೆಸ್ಟ್‌ಮೆಂಟ್ ಮತ್ತು ಡೆಪ್ಯುಟಿ ಹೈಕಮಿಷನರ್ ಸೌತ್ ಏಷ್ಯಾ ಟ್ರೇಡ್ ಕಮಿಷನರ್ ಅನ್ನಾ ಶಾಟ್ಬೋಲ್ಟ್, ಯುಎಸ್ ಕಾನ್ಸುಲೇಟ್ನ ಪಬ್ಲಿಕ್ ಅಫೇರ್ಸ್ ಕಾನ್ಸುಲ್ ಆಗಿರುವ ಅನ್ನೀ ಶೇಷಾದ್ರಿ, ಮಾಜಿ ಕ್ರಿಕೆಟಿಗ ಸೈಯದ್ ಕಿರ್ಮಾನಿ, ಇಂಡಸ್ ಇಂಡ್ ಬ್ಯಾಂಕ್ನ ಸಿಎಸ್‌ಆರ್ ವಿಭಾಗದ ಮುಖ್ಯಸ್ಥರಾದ ಶ್ರೀ ಮಟಿಲ್ಡಾ ಲೋಬೋ, ಯುನೈಟೆಡ್ ವೇ ಮುಂಬಯಿಯ ಕಮ್ಯುನಿಟಿ ಇನ್ವೆಸ್ಟ್‌ಮೆಂಟ್‌ನ ಉಪಾಧ್ಯಕ್ಷ ಶ್ರೀ ಅನಿಲ್ ಪರ್ಮಾರ್, ಸಮರ್ಥನಮ್ ಟ್ರಸ್ಟ್‌ನ ಸಂಸ್ಥಾಪಕ ವ್ಯವಸ್ಥಾಪನಾ ಟ್ರಸ್ಟಿ ಹಾಗೂ ಭಾರತೀಯ ದೃಷ್ಟಿವಿಶೇಷಚೇತನ ಕ್ರಿಕೆಟ್ ಸಂಸ್ಥೆಯ (CABI) ಅಧ್ಯಕ್ಷರಾದ ಡಾ. ಮಹಾಂತೇಶ್ ಜಿ. ಕಿವಡಸಣ್ಣವರ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ದೃಷ್ಟಿ ವಿಶೇಷಚೇತನರ ಕ್ರಿಕೆಟ್‌ನ ಸಾಧನೆಗಳು, ಅದರ ಯಶಸ್ವಿನ ಕತೆಗಳು, ಅದರ ಭವಿಷ್ಯ ಹಾಗೂ ಗುರಿಯೆಡೆಗಿನ ವಿಸ್ತರಿತ ಹಾದಿಯ ಬಗ್ಗೆ ವಿಮರ್ಶೆ ನಡೆಸುವುದೇ ಈ ಸಮ್ಮೇಳನದ ಉದ್ದೇಶವಾಗಿದೆ. ವಿಶ್ವ ದೃಷ್ಟಿ ವಿಶೇಷಚೇತನ ಕ್ರಿಕೆಟ್ ಸಂಸ್ಥೆಯಿಂದ ಮಾನ್ಯತೆ ಪಡೆದಿರುವ ಭಾರತೀಯ ದೃಷ್ಟಿ ವಿಶೇಷಚೇತನ ಸಂಸ್ಥೆಯು ಅಡಿಯಲ್ಲಿ 30 ರಾಜ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, 25,000 ಕ್ರಿಕೆಟಿಗರು ಹೆಸರು ನೋಂದಾಯಿಸಿಕೊಂಡಿದ್ದಾರೆ. ಈ ಸಂಸ್ಥೆಯು ಕ್ರಿಕೆಟ್ ಪ್ರವಾಸಗಳನ್ನು, ಟೂರ್ನಿಮೆಂಟ್‌ಗಳನ್ನು ಆಯೋಜಿಸುವುದು. ದೃಷ್ಟಿ ವಿಶೇಷಚೇತನರಿಗೆ ಕ್ರಿಕೆಟ್ ತರಬೇತಿ ನೀಡುವ ಹಾಗೂ ಉದಯೋನ್ಮುಖ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡುವ ಜತೆಗೆ ದೃಷ್ಟಿ ವಿಶೇಷಚೇತನ ಕ್ರಿಕೆಟ್ ಕುರಿತು ಅರಿವು ಮೂಡಿಸುವ ಕೆಲಸ ಮಾಡುತ್ತದೆ.

ಭಾರತೀಯ ದೃಷ್ಟಿ ವಿಶೇಷಚೇತನರ ಕ್ರಿಕೆಟ್ ಸಂಸ್ಥೆಯ ಅಧ್ಯಕ್ಷರಾದ ಡಾ. ಮಹಾಂತೇಶ್ ಕಿವಡಸಣ್ಣವರ್ ಮಾತನಾಡಿ, "ದೃಷ್ಟಿ ವಿಶೇಷ ಚೇತನರ ಕ್ರಿಕೆಟ್ ಸಮ್ಮೇಳನವು ದೃಷ್ಟಿ ವಿಶೇಷಚೇತನರ ಕ್ರಿಕೆಟ್‌ನ ಮೈಲುಗಲ್ಲಾಗಿದೆ. ಈ ಸಮ್ಮೇಳನದ ಮೂಲಕ ಹೊಸ ಅನುಭವಗಳು, ಒಳನೋಟ, ದೃಷ್ಟಿ ವಿಶೇಷಚೇತನ ಕ್ರಿಕೆಟರ್‌ಗಳು ನಿರ್ದಿಷ್ಟವಾಗಿ ಭಾರತದಲ್ಲಿ ಹಾಗೂ ಜಾಗತಿಕವಾಗಿ ಸಾಮಾನ್ಯವಾಗಿ ಎದುರಿಸುವ ಸಮಸ್ಯೆಗಳಿಗೆ ಪರಿಹಾರಗಳನ್ನು ಸೂಚಿಸುತ್ತವೆ." ಎಂದು ಹೇಳಿದರು.

| Publication: Vartha Bharathi | Date: 1 March 22 | Page: 3 |
|---|---|---|

# ಇಚ್ಛಾಶಕ್ತಿ, ಉತ್ಸಾಹವಿದ್ದರೆ ಸಾಧನೆ ಸಾಧ್ಯ: ರಾಜ್ಯಪಾಲ



ದೃಷ್ಟಿ ವಿಕಲಚೇತನರ ಶಿಕ್ಷಣ ಮತ್ತು ಪುನರ್ವಸತಿಗಾಗಿ ಭಾರತ ಸರಕಾರದಿಂದ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ವಿಶ್ಯುಲಿ ಹ್ಯಾಂಡಿಕ್ಯಾಪ್ಡ್ ಡೆಹ್ರಾಡೂನ್ ಅನ್ನು ಸ್ಥಾಪಿಸಲಾಗಿದೆ. ಭಾರತ ಸರಕಾರವು ಬ್ರೈಲ್ ಅಭಿವೃದ್ಧಿಗಾಗಿ ಮತ್ತು ಬ್ರೈಲ್ ಪುಸ್ತಕಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಬ್ರೈಲ್ ಪ್ರೆಸ್‌ಗಳ ಸ್ಥಾಪನೆ ಮತ್ತು ಅಸ್ತಿತ್ವದಲ್ಲಿರುವ ಬ್ರೈಲ್ ಪ್ರೆಸ್‌ಗಳ ಆಧುನೀಕರಣದ ಮಹತ್ವಾಕಾಂಕ್ಷೆಯ ಕಾರ್ಯಕ್ರಮವನ್ನು ಕೈಗೊಳ್ಳುತ್ತಿದೆ.

**-ಥಾವರ್ ಚಂದ್ ಗೆಹ್ಲೋಟ್**, ರಾಜ್ಯಪಾಲ

ಬೆಂಗಳೂರು, ಫೆ.28: ಇಚ್ಛಾಶಕ್ತಿ ಮತ್ತು ಉತ್ಸಾಹ ಹೊಂದಿದ್ದರೆ ದೃಷ್ಟಿಹೀನತೆ ಅಥವಾ ಯಾವುದೇ ಅಂಗವೈಕಲ್ಯವು ಸಾಧನೆಗೆ ಅಡ್ಡಿ ಮಾಡುವುದಿಲ್ಲ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಹೇಳಿದ್ದಾರೆ.

ಸೋಮವಾರ ಖಾಸಗಿ ಹೊಟೇಲ್‌ನಲ್ಲಿ ಸಮರ್ಥನಂ ಟ್ರಸ್ಟ್ ವಿಕಲಚೇತನರಿಗಾಗಿ ಆಯೋಜಿಸಿದ್ದ ರಾಷ್ಟ್ರೀಯ ಇಂಡಸ್ಲ್ಯಾಂಡ್ ಬ್ಯಾಂಕ್ ಬ್ಲೈಂಡ್ ಕ್ರಿಕೆಟ್-2022ನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿಶೇಷಚೇತನರು ಮಾನವ ಸಂಪನ್ಮೂಲದ ಅವಿಭಾಜ್ಯ ಅಂಗವಾಗಿದ್ದು, ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಮೂಲಕ ದೇಶದ ಅಭಿವೃದ್ಧಿಯಲ್ಲಿ ಪಾಲುದಾರರನ್ನಾಗಿ ಮಾಡುವುದು ನಮ್ಮ ಗುರಿಯಾಗಿದೆ. ವಿಶೇಷಚೇತನರಲ್ಲಿ ಇಚ್ಛಾಶಕ್ತಿ ಮತ್ತು ಉತ್ಸಾಹ ತುಂಬುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದರು.

ನಮ್ಮ ದೇಶದ ಪ್ರಧಾನಿ ಮೋದಿ ಸಮರ್ಥ ನಾಯಕತ್ವದಲ್ಲಿ ಸಬ್ಕಾ ಸಾಥ್ ಸಬ್ಕಾ ವಿಕಾಸ್ ಮಂತ್ರವನ್ನು ಅರಿತುಕೊಂಡ ಭಾರತ ಸರಕಾರವು ಎಲ್ಲರನ್ನೂ ಒಳಗೊಳ್ಳುವ ಸಮಾಜವನ್ನು ನಿರ್ಮಿಸಲು ಮತ್ತು ದಿವ್ಯಾಂಗರ ಸಬಲೀಕರಣಕ್ಕಾಗಿ ಅಭೂತಪೂರ್ವ ಮತ್ತು ಶ್ಲಾಘನೀಯ ಕೆಲಸವನ್ನು ಮಾಡುತ್ತಿದೆ. ಭಾರತ ಸರಕಾರದ ವಿಕಲಚೇತನರ ಸಬಲೀಕರಣ ಇಲಾಖೆಯ ಎಡಿಐಪಿ ಯೋಜನೆಯಡಿ ದೃಷ್ಟಿ ವಿಕಲಚೇತನರಿಗೆ ಸ್ಮಾರ್ಟ್ ಫೋನ್, ಡಿಜಿಪ್ಲೇಯರ್ ಮತ್ತು ವಾಕಿಂಗ್ ಸ್ಟಿಕ್‌ಗಳು ಮತ್ತು ಸ್ಮಾರ್ಟ್ ಕ್ಯಾನ್‌ಗಳಂತಹ ಸಹಾಯಕ ಸಾಧನಗಳನ್ನು ಒದಗಿಸಲಾಗುತ್ತಿದೆ ಎಂದು ಹೇಳಿದರು.

ದಿವ್ಯಾಂಗರ ಸಬಲೀಕರಣಕ್ಕಾಗಿ ಸರಕಾರದ ಜೊತೆಗೆ ಕಾರ್ಪೋರೇಟ್ ಜಗತ್ತು ಮತ್ತು ಅನೇಕ ಸ್ವಯಂ ಸೇವಾ ಸಂಸ್ಥೆಗಳು ಶ್ರಮಿಸುತ್ತಿವೆ. ಅದರಲ್ಲಿ ಸಮರ್ಥನಂ ಟ್ರಸ್ಟ್ ಒಂದಾಗಿದೆ. ಡಾ. ಮಹಾಂತೇಶ ಜೀ ಅವರ ಪ್ರಯತ್ನದಿಂದ ಇಂದು ದೃಷ್ಟಿ ವಿಕಲಚೇತನರ ಕ್ರಿಕೆಟ್‌ನಲ್ಲಿ ದೇಶವು ವಿಶ್ವದಲ್ಲೇ ಹೊಸ ಗುರುತನ್ನು ಪಡೆದುಕೊಂಡಿದೆ. ವಿಶೇಷವಾಗಿ ಅಂಧರ ಕ್ರಿಕೆಟ್ ತಂಡ, 2014ರಲ್ಲಿ ಅಂಧರ ವಿಶ್ವಕಪ್ ಗೆಲ್ಲುವ ಮೂಲಕ ಭಾರತದ ಗೌರವವನ್ನು ಹೆಚ್ಚಿಸಿತು. ಭಾರತ ಸರಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಅಂಗವಿಕಲ ವ್ಯಕ್ತಿಗಳ ಸಬಲೀಕರಣ ಇಲಾಖೆಯಿಂದ ದೃಷ್ಟಿ ವಿಕಲಚೇತನ ತಂಡದ ಆಟಗಾರರಿಗೆ ನಗದು ಬಹುಮಾನ ನೀಡಿ ಪ್ರೋತ್ಸಾಹಿಸಲಾಯಿತು ಎಂದರು.

ಕಾರ್ಯಕ್ರಮದಲ್ಲಿ ಭಾರತದ ಮಾಜಿ ಕ್ರಿಕೆಟಿಗ ಸೈಯದ್ ಕಿರ್ಮಾನಿ, ಸಮರ್ಥನಂ ಟ್ರಸ್ಟ್ ಸಂಸ್ಥಾಪಕ ಮಹಾಂತೇಶ್, ಇಂಡಸ್ ಬ್ಯಾಂಕ್‌ನ ಮತಿಲ್ಡಾ ಲೋಬಾ ಸೇರಿದಂತೆ ಮುಂತಾದ ಗಣ್ಯರು ಉಪಸ್ಥಿತರಿದ್ದರು.

| Publication: Vishwavani | Date: 1 March 22 | Page: 12 |
| --- | --- | --- |

# ಇಂದಿನಿಂದ ಅಂಧ ಮಹಿಳೆಯರ ಟಿ20 ಕ್ರಿಕೆಟ್

**ಬೆಂಗಳೂರು:** ಅಂಧ ಮಹಿಳೆಯರಿಗಾಗಿ ರಾಷ್ಟ್ರೀಯ ಟಿ20 ಕ್ರಿಕೆಟ್ ಟೂರ್ನಿಯು ಉದ್ಯಾನನಗರಿಯಲ್ಲಿ ಮಂಗಳವಾರದಿಂದ ನಡೆಯಲಿದ್ದು 14 ತಂಡಗಳು ಪ್ರಶಸ್ತಿಗಾಗಿ ಸೆಣಸಲಿವೆ. ನಗರದಲ್ಲಿ ಸೋಮವಾರ ನಡೆದ ಅಂಧರ ಕ್ರಿಕೆಟ್ ರಾಷ್ಟ್ರೀಯ ಸಮ್ಮೇಳನದಲ್ಲಿ ಈ ಕುರಿತು ಪ್ರಕಟಿಸಿ ಟೂರ್ನಿಯ ಟ್ರೋಫಿಗಳನ್ನು ಅನಾವರಣ ಮಾಡಲಾಯಿತು. ಮಾರ್ಚ್ 1ರಿಂದ ಮಾರ್ಚ್ 5ರವರೆಗೆ ಬೆಂಗಳೂರಿನ ಮೂರು ಕ್ರೀಡಾಂಗಣಗಳಲ್ಲಿ ಪಂದ್ಯಗಳು ನಡೆಯಲಿವೆ. 14 ರಾಜ್ಯಗಳು ಪಾಲ್ಗೊಳ್ಳಲಿದ್ದು, 224 ಆಟಗಾರ್ತಿಯರು ಪಾಲ್ಗೊಳ್ಳಲಿದ್ದಾರೆ. ಟೂರ್ನಿಯಲ್ಲಿ ವಿಜೇತ ತಂಡವು ರು. 1 ಲಕ್ಷ 4 ಸಾವಿರ ಮತ್ತು ಟ್ರೋಫಿಯನ್ನು ತನ್ನದಾಗಿಸಿಕೊಳ್ಳಲಿದೆ. ರನ್ನರ್ಸ್ ಅಪ್ ತಂಡವು ರು. 80 ಸಾವಿರ ಪಡೆಯಲಿದೆ.

| Publication: Vishwa Vaaridhi | Date: 1 March 22 | Page: 2 |
|---|---|---|

# ಇಂಡಸ್‌ಇಂಡ್ ಬ್ಯಾಂಕ್ ದೃಷ್ಟಿ ವಿಶೇಷಚೇತನರ 'ಕ್ರಿಕೆಟ್ ರಾಷ್ಟ್ರೀಯ ಸಮ್ಮೇಳನ–2022'

ವಿಶ್ವವಾರಿಧಿ । ಬೆಂಗಳೂರು

ಭಾರತೀಯ ದೃಷ್ಟಿ ವಿಶೇಷಚೇತನರ ಕ್ರಿಕೆಟ್ ಸಂಸ್ಥೆಯು ಸಮರ್ಥನಮ್ ವಿಶೇಷ ಚೇತನರ ಸಂಸ್ಥೆಯ ಸಹಯೋಗದೊಂದಿಗೆ ಆಯೋಜಿಸಿದ್ದ 3ನೇ ಇಂಡಸ್ ಇಂಡ್ ಬ್ಯಾಂಕ್ ದೃಷ್ಟಿ ವಿಶೇಷಚೇತನರ ಕ್ರಿಕೆಟ್ ರಾಷ್ಟ್ರೀಯ ಸಮ್ಮೇಳನ– 2022ಕ್ಕೆ ಫೆಬ್ರವರಿ 28ರಂದು ಚಾಲನೆ ದೊರೆಯಿತು. ಬೆಂಗಳೂರಿನ ಶಾಂತಲಾ ನಗರದ ರೆಸಿಡೆನ್ಸಿ ರಸ್ತೆಯಲ್ಲಿರುವ ದಿ ಚಾನ್ಸರಿ ಪೆವಿಲಿಯನ್ನ ಗ್ರಾಂಡ್ ಬಾಲ್ ರೂಮ್ನಲ್ಲಿ ಬೆಳಗ್ಗೆ 10 ಗಂಟೆಗೆ ಕಾರ್ಯಕ್ರಮ ಉದ್ಘಾಟನೆಗೊಂಡಿತು.

ಕ್ರಿಕೆಟ್ ಆಸಕ್ತರು ಹಾಗೂ ತಜ್ಞರು, ಲಾಭೇತರ ಸಂಸ್ಥೆಯ ಸಿಬ್ಬಂದಿ, ಕಾರ್ಪೊರೇಟ್ ಸಂಸ್ಥೆಗಳ ಮುಖ್ಯಸ್ಥರು, ಸರಕಾರದ ಗಣ್ಯರು, ಹಾಗೂ ದೃಷ್ಟಿ ವಿಶೇಷಚೇತನ ಕ್ರಿಕೆಟ್ ತಂಡದ ಸದಸ್ಯರು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು.

ಕರ್ನಾಟಕ ರಾಜ್ಯದ ಘನತೆವೆತ್ತ ರಾಜ್ಯಪಾಲರಾದ ಶ್ರೀ ಥಾವರ್‌ಚಂದ್ ಗೆಹ್ಲೋಟ್ ಅವರು ಇಂಡಸ್ ಇಂಡ್ ಬ್ಯಾಂಕ್ ದೃಷ್ಟಿವಿಶೇಷಚೇತನ ಕ್ರಿಕೆಟ್ ರಾಷ್ಟ್ರೀಯ ಸಮ್ಮೇಳನ– 2022ರ ಉದ್ಘಾಟನಾ ಸಮಾರಂಭದ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ಇನ್ವೆಸ್ಟ್‌ಮೆಂಟ್ ಅಂಡ್ ಡೆಪ್ಯುಟಿ ಹೈಕಮಿಷನರ್ ಸೌತ್ ಏಷ್ಯಾ ಟ್ರೇಡ್ ಕಮಿಷನರ್ ಅನ್ನಾ ಶಾಟ್ಬೋಲ್ಟ್, ಯುಎಸ್ ಕಾನ್ಸುಲೇಟ್ನ ಪಬ್ಲಿಕ್ ಅಫೇರ್ಸ್ ಕಾನ್ಸುಲ್ ಆಗಿರುವ ಆನ್ನೇ ಶೇಷಾದ್ರಿ, ಮಾಜಿ ಕ್ರಿಕೆಟಿಗ ಸೈಯದ್ ಕಿರ್ಮಾನಿ, ಇಂಡಸ್ ಇಂಡ್ ಬ್ಯಾಂಕ್ನ ಸಿಎಸ್‌ಆರ್ ವಿಭಾಗದ ಮುಖ್ಯಸ್ಥರಾದ ಮಟಿಲ್ಡಾ ಲೋಬೊ, ಯುನೈಟೆಡ್ ವೇ ಮುಂಬಯಿಯ ಕಮ್ಯುನಿಟಿ ಇನ್ವೆಸ್ಟ್‌ಮೆಂಟ್ನ ಉಪಾಧ್ಯಕ್ಷ ಅನಿಲ್ ಪರ್ಮಾರ್, ಸಮರ್ಥನಮ್ ಟ್ರಸ್ಟ್ ಸಂಸ್ಥಾಪಕ ವ್ಯವಸ್ಥಾಪನಾ ಟ್ರಸ್ಟಿ ಹಾಗೂ ಭಾರತೀಯ ದೃಷ್ಟಿವಿಶೇಷಚೇತನ ಕ್ರಿಕೆಟ್ ಸಂಸ್ಥೆಯ ಅಧ್ಯಕ್ಷರಾದ ಡಾ. ಮಹಾಂತೇಶ್ ಜಿ. ಕಿವಡಸಣ್ಣವರ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.




ಮಾರ್ಚ್ 13ರಿಂದ ಯುಎಇನಲ್ಲಿ ನಡೆಯಲಿರುವ ಬಾಂಗ್ಲಾದೇಶ ಹಾಗೂ ಪಾಕಿಸ್ತಾನ ದೃಷ್ಟಿ ವಿಶೇಷಚೇತನ ತಂಡಗಳ ವಿರುದ್ಧದ ಟಿ20 ತ್ರಿಕೋನ ಸರಣಿಗೆ ಹೊರಡಲಿರುವ ಭಾರತ ತಂಡಕ್ಕೆ ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್ ಅವರು ಶುಭಾಶಯ ಕೋರಿದರು.

ಈ ಟೂರ್ನಿಯ ಫೈನಲ್ ಪಂದ್ಯ ಮಾರ್ಚ್ 19ರಂದು ನಡೆಯಲಿದೆ. "ಯುಎಇಗೆ ತ್ರಿಕೋನ ಸರಣಿಗೆ ಹೊರಟಿರುವ ನಿಮಗೆ ಶುಭಾಶಯಗಳು," ಎಂದು ರಾಜ್ಯಪಾಲರು ಹೇಳಿದರು.

| | | |
|---|---|---|
| **Publication: Rajasthan Partika** | **Date: 1 March 22** | **Page: 3** |




**बेंगलूरु में** सोमवार को नेत्रहीन क्रिकेट पर आयोजित राष्ट्रीय सम्मेलन का उद्घाटन करते राज्यपाल थावरचंद गहलोत, साथ में पूर्व क्रिकेटर सैयद किरमानी व अन्य।

| Publication: Sanje Samaya | Date: 28 Feb 22 | Page: 4 |
|---|---|---|

# ಕೆಟ್ ದೃಷ್ಟಿ ವಿಶೇಷಚೇತನರಿಗೆ ಪ್ರೇರಕ ಶಕ್ತಿ

**ಬೆಂಗಳೂರು:** ಭಾರತೀಯ ದೃಷ್ಟಿ ವಿಶೇಷಚೇತನರ ಕ್ರಿಕೆಟ್ ಸಂಸ್ಥೆಯು (ಅಂಃಖ) ಸಮರ್ಥನಮ್ ವಿಶೇಷ ಚೇತನರ ಸಂಸ್ಥೆ ಸಹಯೋಗದೊಂದಿಗೆ ಆಯೋಜಿಸಿದ್ದ 3ನೇ ಇಂಡಸ್ ಇಂಡ್ ಬ್ಯಾಂಕ್ ದೃಷ್ಟಿ ವಿಶೇಷಚೇತನರ ಕ್ರಿಕೆಟ್ ರಾಷ್ಟ್ರೀಯ ಸಮ್ಮೇಳನ–2022ಕ್ಕೆ ಫೆಬ್ರವರಿ 28ರಂದು ಚಾಲನೆ ದೊರೆಯಿತು. ಬೆಂಗಳೂರಿನ ಶಾಂತಲಾ ನಗರದ ರೆಸಿಡೆನ್ಸಿ ರಸ್ತೆಯಲ್ಲಿರುವ ದಿ ಚಾನ್ಸರಿ ಪೆವಿಲಿಯನ್ನ ಗ್ರಾಂಡ್ ಬಾಲ್ ರೂಮ್ನಲ್ಲಿ ಬೆಳಗ್ಗೆ 10 ಗಂಟೆಗೆ ಕಾರ್ಯಕ್ರಮ ಉದ್ಘಾಟನೆಗೊಂಡಿತು.

ಕ್ರಿಕೆಟ್ ಆಸಕ್ತರು ಹಾಗೂ ತಜ್ಞರು, ಲಾಭೇತರ ಸಂಸ್ಥೆಯ ಸಿಬ್ಬಂದಿ, ಕಾರ್ಪೊರೇಟ್ ಸಂಸ್ಥೆಗಳ ಮುಖ್ಯಸ್ಥರು, ಸರಕಾರದ ಗಣ್ಯರು, ಹಾಗೂ ದೃಷ್ಟಿ ವಿಶೇಷಚೇತನ ಕ್ರಿಕೆಟ್ ತಂಡದ ಸದಸ್ಯರು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು.

ಕರ್ನಾಟಕ ರಾಜ್ಯದ ಘನತೆವೆತ್ತ ರಾಜ್ಯಪಾಲರಾದ ತಾವರ್ಚಂದ್ ಗೆಹ್ಲೋಟ್ ಅವರು ಇಂಡಸ್‌ಇಂಡ್ ಬ್ಯಾಂಕ್ ದೃಷ್ಟಿವಿಶೇಷಚೇತನ ಕ್ರಿಕೆಟ್ ರಾಷ್ಟ್ರೀಯ ಸಮ್ಮೇಳನ– 2022ರ ಉದ್ಘಾಟನಾ ಸಮಾರಂಭದ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಇನ್ವೆಸ್ಟ್ಮೆಂಟ್ ಆಯಂಡ್ ಡೆಪ್ಯುಟಿ ಹೈಕಮಿಷನರ್ನ ಸೌತ್ ಏಷ್ಯಾ ಟ್ರೇಡ್ ಕಮಿಷನರ್ ಅನ್ನಾ ಶಾಟ್ಬೋಲ್ಟ್, ಯುಎಸ್ ಕಾನ್ಸುಲೇಟ್ನ ಪಬ್ಲಿಕ್ ಅಫೇರ್ಸ್ ಕಾನ್ಸುಲ್ ಆಗಿರುವ ಅನ್ನೇ ಶೇಷಾದ್ರಿ, ಮಾಜಿ ಕ್ರಿಕೆಟಿಗ ಸೈಯದ್ ಕಿರ್ಮಾನಿ, ಇಂಡಸ್‌ಇಂಡ್ ಬ್ಯಾಂಕ್ನ ಸಿಎಸ್‌ಆರ್ ವಿಭಾಗದ ಮುಖ್ಯಸ್ಥರಾದ ಶ್ರೀ ಮಟಿಲ್ಡಾ ಲೋಬೊ, ಯುನೈಟೆಡ್ ವೇ ಮುಂಬಯಿಯ ಕಮ್ಯುನಿಟಿ ಇನ್ವೆಸ್ಟ್ಮೆಂಟ್ನ ಉಪಾಧ್ಯಕ್ಷ ಅನಿಲ್




ಪರ್ಮಾರ್, ಸಮರ್ಥನಮ್ ಟ್ರಸ್ಟ್ನ ಸಂಸ್ಥಾಪಕ ವ್ಯವಸ್ಥಾಪನಾ ಟ್ರಸ್ಟಿ ಹಾಗೂ ಭಾರತೀಯ ದೃಷ್ಟಿವಿಶೇಷಚೇತನ ಕ್ರಿಕೆಟ್ ಸಂಸ್ಥೆಯ (ಅಂಃಖ) ಅಧ್ಯಕ್ಷರಾದ ಡಾ. ಮಹಾಂತೇಶ್ ಜಿ. ಕಿವಡಸಣ್ಣವರ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ದೃಷ್ಟಿ ವಿಶೇಷಚೇತನರ ಕ್ರಿಕೆಟ್ನ ಸಾಧನೆಗಳು, ಅದರ ಯಶಸ್ಸಿನ ಕತೆಗಳು, ಅದರ ಭವಿಷ್ಯ ಹಾಗೂ ಗುರಿಯೆಡೆಗಿನ ವಿಸ್ತರಿತ ಹಾದಿಯ ಬಗ್ಗೆ ವಿಮರ್ಶೆ ನಡೆಸುವುದೇ ಈ ಸಮ್ಮೇಳನದ ಉದ್ದೇಶವಾಗಿದೆ. ವಿಶ್ವ ದೃಷ್ಟಿ ವಿಶೇಷಚೇತನ ಕ್ರಿಕೆಟ್ ಸಂಸ್ಥೆಯಿಂದ ಮಾನ್ಯತೆ ಪಡೆದಿರುವ ಭಾರತೀಯ ದೃಷ್ಟಿ ವಿಶೇಷಚೇತನ ಸಂಸ್ಥೆಯು ಅಡಿಯಲ್ಲಿ 30 ರಾಜ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, 25,000 ಕ್ರಿಕೆಟಿಗರು ಹೆಸರು ನೋಂದಾಯಿಸಿಕೊಂಡಿದ್ದಾರೆ. ಈ ಸಂಸ್ಥೆಯು ಕ್ರಿಕೆಟ್ ಪ್ರವಾಸಗಳನ್ನು, ಟೂರ್ನಮೆಂಟ್ಗಳನ್ನು ಆಯೋಜಿಸುವುದು, ವಿಶೇಷಚೇತನ ಕ್ರಿಕೆಟ್ ಅರಿವು ಮೂಡಿಸುವ ಕೆಲಸ ಮಾಡುತ್ತದೆ.

| Publication: Indu Snaje | Date: 28 Feb 22 | Page: 6 |
|---|---|---|




# ಕ್ರಿಕೆಟ್ ದೃಷ್ಟಿ ವಿಶೇಷಚೇತನರಿಗೆ ಪ್ರೇರಕ ಶಕ್ತಿ!

'ಇಂಡಸ್ ಇಂಡ್ ಬ್ಯಾಂಕ್ ದೃಷ್ಟಿ ವಿಶೇಷಚೇತನರ ಕ್ರಿಕೆಟ್ ರಾಷ್ಟ್ರೀಯ ಸಮ್ಮೇಳನ– 2022'

ಭಾರತೀಯ ದೃಷ್ಟಿ ವಿಶೇಷಚೇತನರ ಕ್ರಿಕೆಟ್ ಸಂಸ್ಥೆಯು (ಅಂಃಖಿ) ಸಮರ್ಥನಮ್ ವಿಶೇಷ ಚೇತನರ ಸಂಸ್ಥೆಯ ಸಹಯೋಗದೊಂದಿಗೆ ಆಯೋಜಿಸಿದ್ದ 3ನೇ ಇಂಡಸ್ ಇಂಡ್ ಬ್ಯಾಂಕ್ ದೃಷ್ಟಿ ವಿಶೇಷಚೇತನರ ಕ್ರಿಕೆಟ್ ರಾಷ್ಟ್ರೀಯ ಸಮ್ಮೇಳನ– 2022ಕ್ಕೆ ಫೆಬ್ರವರಿ 28ರಂದು ಚಾಲನೆ ದೊರೆಯಿತು. ಬೆಂಗಳೂರಿನ ಶಾಂತಲಾ ನಗರದ ರೆಸಿಡೆನ್ಸಿ ರಸ್ತೆಯಲ್ಲಿರುವ ದಿ ಚಾನ್ಸರಿ ಪೆವಿಲಿಯನ್ನ ಗ್ರಾಂಡ್ ಬಾಲ್ ರೂಮ್ನಲ್ಲಿ ಬೆಳಗ್ಗೆ 10 ಗಂಟೆಗೆ ಕಾರ್ಯಕ್ರಮ ಉದ್ಘಾಟನೆಗೊಂಡಿತು.

ಕ್ರಿಕೆಟ್ ಆಸಕ್ತರು ಹಾಗೂ ತಜ್ಞರು, ಲಾಭೇತರ ಸಂಸ್ಥೆಯ ಸಿಬ್ಬಂದಿ, ಕಾರ್ಪೊರೇಟ್ ಸಂಸ್ಥೆಗಳ ಮುಖ್ಯಸ್ಥರು, ಸರಕಾರದ ಗಣ್ಯರು, ಹಾಗೂ ದೃಷ್ಟಿ ವಿಶೇಷಚೇತನ ಕ್ರಿಕೆಟ್ ತಂಡದ ಸದಸ್ಯರು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು.

ಕರ್ನಾಟಕ ರಾಜ್ಯದ ಘನತೆವೆತ್ತ ರಾಜ್ಯಪಾಲರಾದ ಶ್ರೀ ತಾವರ್ಚಂದ್ ಗೆಹ್ಲೋಟ್ ಅವರು ಇಂಡಸ್‌ಇಂಡ್ ಬ್ಯಾಂಕ್ ದೃಷ್ಟಿವಿಶೇಷಚೇತನ ಕ್ರಿಕೆಟ್ ರಾಷ್ಟ್ರೀಯ ಸಮ್ಮೇಳನ–2022ರ ಉದ್ಘಾಟನಾ ಸಮಾರಂಭದ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಇನ್ವೆಸ್ಟ್ಮೆಂಟ್ ಆ?ಯಂಡ್ ಡೆಪ್ಯುಟಿ ಹೈಕಮಿಷನರ್ನ ಸೌತ್ ಏಷ್ಯಾ ಟ್ರೇಡ್ ಕಮಿಷನರ್ ಅನ್ನಾ ಶಾಟ್ಬೋಲ್ಟ್, ಯುಎಸ್ ಕಾನ್ಸುಲೇಟ್ನ ಪಬ್ಲಿಕ್ ಅಫೇರ್ಸ್ ಕಾನ್ಸುಲ್ ಆಗಿರುವ ಅನ್ನೀ ಶೇಷಾದ್ರಿ, ಮಾಜಿ ಕ್ರಿಕೆಟಿಗ ಸೈಯದ್ ಕಿರ್ಮಾನಿ, ಇಂಡಸ್‌ಇಂಡ್ ಬ್ಯಾಂಕ್ನ ಸಿಎಸ್‌ಆರ್ ವಿಭಾಗದ ಮುಖ್ಯಸ್ಥರಾದ ಶ್ರೀ ಮಟಿಲ್ಡಾ ಲೋಬೊ, ಯುನೈಟೆಡ್ ವೇ ಮುಂಬಯಿಯ ಕಮ್ಯುನಿಟಿ ಇನ್ವೆಸ್ಟ್ಮೆಂಟ್ನ ಉಪಾಧ್ಯಕ್ಷ ಶ್ರೀ ಅನಿಲ್ ಪರ್ಮಾರ್, ಸಮರ್ಥನಮ್ ಟ್ರಸ್ಟ್ನ ಸಂಸ್ಥಾಪಕ ವ್ಯವಸ್ಥಾಪನಾ ಟ್ರಸ್ಟಿ ಹಾಗೂ ಭಾರತೀಯ ದೃಷ್ಟಿವಿಶೇಷಚೇತನ ಕ್ರಿಕೆಟ್ ಸಂಸ್ಥೆಯ (ಅಂಃಖಿ) ಅಧ್ಯಕ್ಷರಾದ ಡಾ. ಮಹಾಂತೇಶ್ ಜಿ. ಕಿವಡಸಣ್ಣವರ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ದೃಷ್ಟಿ ವಿಶೇಷಚೇತನರ ಕ್ರಿಕೆಟ್ನ ಸಾಧನೆಗಳು, ಅದರ ಯಶಸ್ವಿನ ಕತೆಗಳು, ಅದರ ಭವಿಷ್ಯ ಹಾಗೂ ಗುರಿಯೆಡೆಗಿನ ವಿಸ್ತರಿತ ಹಾದಿಯ ಬಗ್ಗೆ ವಿಮರ್ಶೆ ನಡೆಸುವುದೇ ಈ ಸಮ್ಮೇಳನದ ಉದ್ದೇಶವಾಗಿದೆ. ವಿಶ್ವ ದೃಷ್ಟಿ ವಿಶೇಷಚೇತನ ಕ್ರಿಕೆಟ್ ಸಂಸ್ಥೆಯಿಂದ ಮಾನ್ಯತೆ ಪಡೆದಿರುವ ಭಾರತೀಯ ದೃಷ್ಟಿ ವಿಶೇಷಚೇತನ ಸಂಸ್ಥೆಯು ಅಡಿಯಲ್ಲಿ 30 ರಾಜ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, 25,000 ಕ್ರಿಕೆಟಿಗರು ಹೆಸರು ನೋಂದಾಯಿಸಿಕೊಂಡಿದ್ದಾರೆ. ಈ ಸಂಸ್ಥೆಯು ಕ್ರಿಕೆಟ್ ಪ್ರವಾಸಗಳನ್ನು, ಟೂರ್ನಮೆಂಟ್‌ಗಳನ್ನು ಆಯೋಜಿಸುವುದು, ದೃಷ್ಟಿ ವಿಶೇಷಚೇತನರಿಗೆ ಕ್ರಿಕೆಟ್ ತರಬೇತಿ ನೀಡುವ ಹಾಗೂ ಉದಯೋನ್ಮುಖ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡುವ ಜತೆಗೆ ದೃಷ್ಟಿ ವಿಶೇಷಚೇತನ ಕ್ರಿಕೆಟ್ ಕುರಿತು ಅರಿವು ಮೂಡಿಸುವ ಕೆಲಸ ಮಾಡುತ್ತದೆ.

ಭಾರತೀಯ ದೃಷ್ಟಿ ವಿಶೇಷಚೇತನರ ಕ್ರಿಕೆಟ್ ಸಂಸ್ಥೆಯ ಅಧ್ಯಕ್ಷರಾದ ಡಾ. ಮಹಾಂತೇಶ್ ಕಿವಡಸಣ್ಣವರ್ ಮಾತನಾಡಿ "ದೃಷ್ಟಿ ವಿಶೇಷಚೇತನರ ಕ್ರಿಕೆಟ್ ಸಮ್ಮೇಳನವು ದೃಷ್ಟಿ ವಿಶೇಷಚೇತನರ ಕ್ರಿಕೆಟ್ನ ಮೈಲುಗಲ್ಲಾಗಿದೆ. ಈ ಸಮ್ಮೇಳನದ ಮೂಲಕ ಹೊಸ ಅನುಭವಗಳು, ಒಳನೋಟ, ದೃಷ್ಟಿ ವಿಶೇಷಚೇತನ ಕ್ರಿಕೆಟರ್ಗಳು ನಿರ್ದಿಷ್ಟವಾಗಿ ಭಾರತದಲ್ಲಿ ಹಾಗೂ ಜಾಗತಿಕವಾಗಿ ಸಾಮಾನ್ಯವಾಗಿ ಎದುರಿಸುವ ಸಮಸ್ಯೆಗಳಿಗೆ ಪರಿಹಾರಗಳನ್ನು ಸೂಚಿಸುತ್ತವೆ," ಎಂದು ಹೇಳಿದರು.

**ಮಹಿಳೆಯರ ಕ್ರಿಕೆಟ್ ಟೂರ್ನಿ ಉದ್ಘಾಟನೆ:** ಸಂಜೆ 4 ಗಂಟೆಗೆ ಅದೇ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಇಂಡಸ್‌ಇಂಡ್ ಬ್ಯಾಂಕ್ ದೃಷ್ಟಿ ವಿಶೇಷಚೇತನ ಮಹಿಳೆಯರ ರಾಷ್ಟ್ರೀಯ ಟಿ20 ಟೂರ್ನಮೆಂಟ್– 2022ಕ್ಕೆ ಚಾಲನೆ ನೀಡಲಾಯಿತು. ಕರ್ನಾಟಕ ಸರಕಾರದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಪರ ಮುಖ್ಯಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ (ಐಎಎಸ್) ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಭಾರತದ ಮಾಜಿ ಕ್ರಿಕೆಟಿಗ ಶ್ರೀ ಸೈಯದ್ ಕಿರ್ಮಾನಿ, ಕರ್ನಾಟಕ ಸರಕಾರದ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ನಿರ್ದೇಶಕರಾದ ಕೆ.ಎಸ್ ಲತಾ ಕುಮಾರಿ (ಐಎಎಸ್), ಇಂಡಸ್‌ಇಂಡ್ ಬ್ಯಾಂಕ್ನ ಸಿಎಸ್‌ಆರ್ ವಿಭಾಗದ ಮುಖ್ಯಸ್ಥರಾದ ಶ್ರೀ ಮಟಿಲ್ಡಾ ಲೋಬೊ, ಭಾರತ ತಂಡದ ಮಾಜಿ ಆಟಗಾರ ಹಾಗೂ ಕೆಎಸ್ಸಿಎನ ಮಾಜಿ ಕಾರ್ಯದರ್ಶಿ ಶ್ರೀ ಸುಧಾಕರ್ ರಾವ್, ಯುನೈಟೆಡ್ ವೇ ಮುಂಬಯಿಯ ಕಮ್ಯುನಿಟಿ ಇನ್ವೆಸ್ಟ್ಮೆಂಟ್ನ ಉಪಾಧ್ಯಕ್ಷ ಶ್ರೀ ಅನಿಲ್ ಪರ್ಮಾರ್, ಕೋಟಕ್ ಮಹೀಂದ್ರಾ ಬ್ಯಾಂಕ್ನ ಸಿಎಸ್‌ಆರ್ ಶ್ರೀ. ಕೆ. ಪಲ್ಲೊವಿ ರಾಜ್, ನೈಕ್ನ ಶ್ರೀ ಯೋಗಾನಂದ ಕೋಟೆ, ಡಾ. ಸುಭಾಷ್ ಮಹಾಜನ್ ಯುಎಸ್‌ಎ, ಸಮರ್ಥನಮ್ ಟ್ರಸ್ಟ್ನ ಸಂಸ್ಥಾಪಕ ವ್ಯವಸ್ಥಾಪನಾ ಟ್ರಸ್ಟಿ ಡಾ. ಮಹಾಂತೇಶ್ ಜಿ.ಕೆ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

| Publication: Eesanje | Date: 28 Feb 22 | Page: 6 |
| --- | --- | --- |

# ಇಚ್ಛಾಶಕ್ತಿ, ಉತ್ಸಾಹವಿದ್ದರೆ ಸಾಧನೆ ಸಾಧ್ಯ




**ಬೆಂಗಳೂರು,ಫೆ.28-** ಇಚ್ಛಾಶಕ್ತಿ ಮತ್ತು ಉತ್ಸಾಹ ಹೊಂದಿದ್ದರೆ ದೃಷ್ಟಿಹೀನತೆ ಅಥವಾ ಯಾವುದೇ ಅಂಗವೈಕಲ್ಯವು ಸಾಧನೆಗೆ ಅಡಿ ಮಾಡುವುದಿಲ್ಲ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಹೇಳಿದರು.

ನಗರದ ಚಾನ್ಸೆರಿ ಪೆವಿಲಿಯನ್‌ನಲ್ಲಿ ಸಮರ್ಥನಂ ಟ್ರಸ್ಟ್ ವಿಕಲಚೇತನರಿಗಾಗಿ ಆಯೋಜಿಸಿದ್ದ ಇಂಡಸ್ಲ್ಯಾಂಡ್ ಬ್ಯಾಂಕ್ ಬ್ಲೈಂಡ್ ಕ್ರಿಕೆಟ್ ರಾಷ್ಟ್ರೀಯ ಸಮ್ಮೇಳನ-2022 ಅನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿಶೇಷ ಚೇತನರು ಮಾನವ ಸಂಪನ್ಮೂಲದ ಅವಿಭಾಜ್ಯ ಅಂಗವಾಗಿದ್ದು, ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಮೂಲಕ ದೇಶದ ಅಭಿವೃದ್ಧಿಯಲ್ಲಿ ಪಾಲುದಾರರನ್ನಾಗಿ ಮಾಡುವುದು ನಮ್ಮ ಗುರಿಯಾಗಿದೆ. ವಿಶೇಷ ಚೇತನರಲ್ಲಿ ಇಚ್ಛಾಶಕ್ತಿ ಮತ್ತು ಉತ್ಸಾಹ ತುಂಬುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

ಭಾರತ ಸರ್ಕಾರದ ವಿಕಲಚೇತನರ ಸಬಲೀಕರಣ ಇಲಾಖೆಯ ಎಡಿಐಪಿ ಯೋಜನೆಯಡಿ ದೃಷ್ಟಿ ವಿಕಲಚೇತನರಿಗೆ ಸ್ಮಾರ್ಟ್ ಫೋನ್, ಡಿಜಿಪ್ಲೇಯರ್ ಮತ್ತು ವಾಕಿಂಗ್ ಸ್ಟಿಕ್‌ಗಳು ಮತ್ತು ಸ್ಮಾರ್ಟ್ ಕ್ಯಾನ್‌ಗಳಂತಹ ಸಹಾಯಕ ಸಾಧನಗಳನ್ನು ಒದಗಿಸಲಾಗುತ್ತಿದೆ ಎಂದು ಹೇಳಿದರು.

ಡಾ. ಮಹಾಂತೇಶ ಜೀ ಅವರ ಪ್ರಯತ್ನದಿಂದ ಇಂದು ದೃಷ್ಟಿ ವಿಕಲಚೇತನರ ಕ್ರಿಕೆಟ್ನಲ್ಲಿ ದೇಶವು ವಿಶ್ವದಲ್ಲೇ ಹೊಸ ಗುರುತನ್ನು ಪಡೆದುಕೊಂಡಿದೆ. ವಿಶೇಷವಾಗಿ ಅಂಧರ ಕ್ರಿಕೆಟ್ ತಂಡ, 2014 ರಲ್ಲಿ ಅಂಧರ ವಿಶ್ವಕಪ್ ಗೆಲ್ಲುವ ಮೂಲಕ ಭಾರತದ ಗೌರವವನ್ನು ಹೆಚ್ಚಿಸಿತು. ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಅಂಗವಿಕಲ ವ್ಯಕ್ತಿಗಳ ಸಬಲೀಕರಣ ಇಲಾಖೆಯಿಂದ ದೃಷ್ಟಿ ವಿಕಲಚೇತನ ತಂಡದ ಆಟಗಾರರಿಗೆ ನಗದು ಬಹುಮಾನ ನೀಡಿ ಪ್ರೋತ್ಸಾಹಿಸಲಾಯಿತು ಎಂದರು.

ಮಾಜಿ ಕ್ರಿಕೆಟಿಗ ಸೈಯದ್ ಕಿರ್ಮಾನಿ, ಸಮರ್ಥನಂ ಟ್ರಸ್ಟ್ ಸಂಸ್ಥಾಪಕ ಮಹಂತೇಶ್, ಇಂಡಸ್ ಬ್ಯಾಂಕ್ ನ ಮತಿಲ್ದಾ ಲೋಬಾ ಸೇರಿದಂತೆ ಮುಂತಾದ ಗಣ್ಯರು ಉಪಸ್ಥಿತರಿದ್ದರು.